# ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

## ಡಯಟ್, ಚಿಕ್ಕಮಗಳೂರು

# ಪಾಠ ಆಧಾರಿತ ಮೌಲ್ಯಾಂಕನ ಸಾಮಾಗ್ರಿ

**ವಿಷಯ- ಕನ್ನಡ**

**ಸವಿಗನ್ನಡ- 3 ನೇ ತರಗತಿ**

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಬನಶಂಕರಿ 3ನೇ ಹಂತ, ಬೆಂಗಳೂರು-560085

| |
|---|
| ಪರಿಕಲ್ಪನೆ ಮತ್ತು ಮಾರ್ಗದರ್ಶನ |
| ಶ್ರೀಮತಿ ರಶ್ಮಿ ಮಹೇಶ್. ವಿ ಭಾ.ಆ.ಸೇ. |
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು |
| ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ |

| | |
|---|---|
| ಡಾ. ತ್ರಿಲೋಕ್ ಚಂದ್ರ ಕೆ.ವಿ., ಬಾ.ಆ.ಸೇ.<br>ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು | ಶ್ರೀ ಗೋಪಾಲ ಕೃಷ್ಣ ಹೆಚ್.ಎನ್.<br>ನಿರ್ದೇಶಕರು. ಡಿಎಸ್.ಇ.ಆರ್.ಟಿ, ಬೆಂಗಳೂರು |

ಡಯಟ್ ಸಹಕಾರ

| | |
|---|---|
| ಪ್ರಾಂಶುಪಾಲರು<br>ಶ್ರೀ ಆಂತೋಣಿ ರಾಜ್ ಚಿಕ್ಕಮಗಳೂರು | ಮೆಂಟರ್<br>ಶ್ರೀ ಉಮಾನಾಯ್ಕ. ಎನ್.<br>ಉಪನ್ಯಾಸಕರು |

ಸಂಯೋಜನೆ

| |
|---|
| ಶ್ರೀಮತಿ ರಾಧಾ.ಪಿ ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು. |

ಪಾಠ ಆಧಾರಿತ ಮೌಲ್ಯಾಂಕನ ಸಾಮಾಗ್ರಿ ರಚನಾ ಸಂಪನ್ಮೂಲ ತಂಡ

| | |
|---|---|
| 1. ಸತೀಶ್ ಎಸ್.ಬಿ. ಸ.ಶಿ., ಸ.ಹಿ.ಪ್ರಾ.ಶಾಲೆ, ಸೊಕ್ಕೆ,<br>ತರೀಕೆರೆ /ತಾ<br>2. ಸಿದ್ದಪ್ಪ. ಸ.ಶಿ. ಜಿ.ಹೆಚ್.ಪಿ.ಎಸ್. ಎಮ್ಮೆದೊಡ್ಡಿ,<br>ಕಡೂರು/ತಾ | 3.ಉಮಾ ಸ.ಶಿ., ಸ.ಹಿ.ಪ್ರಾ.ಶಾಲೆ, ದMಟರಮಕ್ಕಿ,<br>ಚಿಕ್ಕಮಗಳೂರು /ತಾ<br>4. ಅನುಪಮ ಸಿ.ಆರ್.ಪಿ., ಮರ್ಲೆ ಕ್ಲಸ್ಟರ್,<br>ಚಿಕ್ಕಮಗಳೂರು |

ಮಾರ್ಗದರ್ಶಕರು ಹಾಗೂ ಪರಿಶೀಲಕರು

| | |
|---|---|
| ಶ್ರೀಮತಿ ಮೋಹನಕುಮಾರಿ ಎನ್. ಹಿರಿಯ ಉಪನ್ಯಾಸಕರು | ಶ್ರೀಮತಿ ಕವಿತ ಬಿ.ಆರ್.ಪಿ ನೆಲಮಂಗಲ, ಬೆಂಗಳೂರು<br>ಗ್ರಾಮಾಂತರ |

# ಸವಿಗನ್ನಡ

## ತರಗತಿ-03

## ಪರಿವಿಡಿ

## ಪ್ರಶ್ನಾಕೋಶ


| ಕ್ರ.ಸಂ | ಭಾಗದ ಸಂಖ್ಯೆ | ಪಾಠದ ಸಂಖ್ಯೆ | ಪಾಠ/ಪದ್ಯದ ಹೆಸರು | ಪುಟ ಸಂಖ್ಯೆ |
|---|---|---|---|---|
| 01 | ಭಾಗ-01 | | ಕಲಿಕಾ ಫಲಗಳು ಮತ್ತು ನೀಲ ನಕ್ಷೆ | 5-8 |
| 02 | | 1 | ತುತ್ತೂರಿ (ಪದ್ಯ) | 9 |
| 03 | | 2 | ನನ್ನ ಕನಸು (ಪಾಠ) | 10 |
| 04 | | 3 | ಸ್ವಾತಂತ್ರ್ಯ ದಿನಾಚರಣೆ (ಪಾಠ) | 11 |
| 05 | | 4 | ಕಂದ (ಪದ್ಯ) | 12 |
| 06 | | 5 | ಚಿಗುರು (ಪಾಠ) | 13 |
| 07 | | 6 | ಈಸೂರು ಸ್ವಗತ (ಪಾಠ) | 14 |
| 08 | | 7 | ಪ್ರಾಮಾಣಿಕ ಬಾಲಕ (ಪಾಠ) | 15 |
| 09 | | 8 | ಸಂಕ್ರಾಂತಿ (ಪದ್ಯ) | 16 |
| 10 | ಭಾಗ-02 | 9 | ಭಗೀರಥ (ಪಾಠ) | 17 |
| 11 | | 10 | ಮೃಗಾಲಯದಲ್ಲಿ ಒಂದು ದಿನ (ಪಾಠ) | 18 |
| 12 | | 11 | ಜಾತ್ರೆ (ಪಾಠ) | 19 |
| 13 | | 12 | ಅನಾರೋಗ್ಯದ ಸಿಂಹ (ಪದ್ಯ) | 20 |
| 14 | | 13 | ಹೊಯ್ಸಳ(ಪಾಠ) | 21-22 |
| 15 | | 14 | ರಾಜನ ಸುಪ್ರಭಾತ (ಪದ್ಯ) | 23-24 |
| 16 | | 15 | ಆಡೋಣ ಬಾ | 25-26 |
| 17 | | 16 | ಮುಳುಗದ ಸೂರ್ಯ  (ಪದ್ಯ) | 27 |

## ಮಾದರಿ ಕೀಲಿ ಉತ್ತರಗಳು


| ಕ್ರ.ಸಂ | ಭಾಗದ ಸಂಖ್ಯೆ | ಪಾಠದ ಸಂಖ್ಯೆ | ಪಾಠ/ಪದ್ಯದ ಹೆಸರು | ಪುಟ ಸಂಖ್ಯೆ |
|---|---|---|---|---|
| 1 | ಭಾಗ-01 | 1 | ತುತ್ತೂರಿ (ಪದ್ಯ) | 28 |
| 2 | | 2 | ನನ್ನ ಕನಸು (ಪಾಠ) | 29 |
| 3 | | 3 | ಸ್ವಾತಂತ್ರ್ಯ ದಿನಾಚರಣೆ (ಪಾಠ) | 30 |
| 4 | | 4 | ಕಂದ (ಪದ್ಯ) | 31 |
| 5 | | 5 | ಚಿಗುರು (ಪಾಠ) | 32 |
| 6 | | 6 | ಈಸೂರು ಸ್ವಗತ (ಪಾಠ) | 33 |
| 7 | | 7 | ಪ್ರಾಮಾಣಿಕ ಬಾಲಕ (ಪಾಠ) | 34 |
| 8 | | 8 | ಸಂಕ್ರಾಂತಿ (ಪದ್ಯ) | 35 |
| 9 | ಭಾಗ-02 | 9 | ಭಗೀರಥ (ಪಾಠ) | 36 |
| 10 | | 10 | ಮೃಗಾಲಯದಲ್ಲಿ ಒಂದು ದಿನ (ಪಾಠ) | 37 |
| 11 | | 11 | ಜಾತ್ರೆ (ಪಾಠ) | 38 |
| 12 | | 12 | ಅನಾರೋಗ್ಯದ ಸಿಂಹ (ಪದ್ಯ) | 39 |
| 13 | | 13 | ಹೊಯ್ಸಳ(ಪಾಠ) | 40 |
| 14 | | 14 | ರಾಜನ ಸುಪ್ರಭಾತ (ಪದ್ಯ) | 41 |
| 15 | | 15 | ಆಡೋಣ ಬಾ | 42 |
| 16 | | 16 | ಮುಳುಗದ ಸೂರ್ಯ  (ಪದ್ಯ) | 43 |

## ಪ್ರಶ್ನೆಗಳು ಕಠಿಣತೆವಾರು

| ಕ್ರ. ಸಂ | ಪಾಠ/ ಪದ್ಯದ ಸಂಖ್ಯೆ | ಪ್ರಶ್ನೆಗಳ ಸಂಖ್ಯೆ | | |
|---|---|---|---|---|
| | | ಸರಳ | ಸಾದಾರಣ | ಕಠಿಣ |
| 01 | 01 | 1,2,3,5,6,7,10,11,14,15,16,17 | 4,8,9,12,13,18,19,20,21,22 | 23,24 |
| 02 | 02 | 1,2,3,11,12,13,17,18,19,22 | 4.5,6,7,8,9,10,20,21,23 | 14,15,16,24,25,26 |
| 03 | 03 | 1,2,3,4,12,13,14,15,16, | 5,6,7,8,9,10,11,17,18,19 | 20,21,22,23,24 |
| 04 | 04 | 1,2,3,4,5,10,11,17,18,19,24 | 6,7,8,9,12,13,20,21,22,23 | 14,15,16,26 |
| 05 | 05 | 1,2.3.6.7.10.11.12.17.18.19.22 | 4.5.8.9.13.14.15.16.20.21.23 | 24 |
| 06 | 06 | 1,2,3,6,7,10,11,12,15,16,21,22 | 4,5,8,9,13,14,17,18,19,20 | 23,24,25 |
| 07 | 07 | 1,2,3,4,5,6,7,8,13,14, | 9,10,11,12,15,16,17,18,19 | 20,21 |
| 08 | 08 | 1,2,3,4,5,10,11,12,13,14,19,20 | 6,7,8,9,15,16,17,18,19 | ------- |
| 09 | 09 | 1,2,3, 6,7,8,9,10,11, | 4,5,12,13,14,15,16,17,18, | 19 |
| 10 | 10 | 1,2,3,4,5,6,7,8,9,10,11 | 12,13,14,15,16 | 17,18,19 |
| 11 | 11 | 11,12,13,22,23,24,25 | 1,2,3,4,5,6,7,8,9,10 | 14,15,16,17,18,19,20,21 |
| 12 | 12 | 5,6,7,8,9,10,11,12 | 1,2,3,4,13,14,15,16,17,18 | 19,20,21,22,23 |
| 13 | 13 | 1,2,3,4,5,13,14,15 | 6,7,8,9,10,11,12 | 16,17,18 |
| 14 | 14 | 1,2,3,4,5,12,13 | 6,7,8,9,10,11 | 14,15,16 |
| 15 | 15 | 1.2.3.4.5,10,11,12,13,14,15, | 6,7,8,9 | 16,17,18 |
| 16 | 16 | 1,2,3,4,5,11,12,13,14 | 6,7,8,9,10,15,16,17,18 | 19 |

# ನೀಲ ನಕ್ಷೆ

| ಕ್ರ. ಸಂ | ಪಾಠ/ ಪದ್ಯ | ಜ್ಞಾನ | | | ತಿಳುವಳಿಕೆ | | | ಕೌಶಲ್ಯ | | | ಪ್ರಶಂಸೆ/ ಅಭಿವ್ಯಕ್ತಿ | | | ಒಟ್ಟು | | | ಒಟ್ಟು | |
|---|---|---|---|---|---|---|---|---|---|---|---|---|---|---|---|---|---|---|
| | | ಬ, ಆ | ಕಿ. ಉ | ದೀ. ಉ | ಬ, ಆ | ಕಿ. ಉ | ದೀ. ಉ | ಬ, ಆ | ಕಿ. ಉ | ದೀ. ಉ | ಬ, ಆ | ಕಿ. ಉ | ದೀ. ಉ | ಬ, ಆ | ಕಿ. ಉ | ದೀ. ಉ | ಪ್ರಶ್ನೆ | ಅಂಕ |
| 01 | 01 | | 1(12) | | | 1(10) | | | | 3(1) | | | 4(1) | | 22 | 2 | 24 | 29 |
| 02 | 02 | | 10(1) | | | 11(1) | | | | 2(4) | | | 4(1) | | 21(1) | 4(1)<br>2(4) | 26 | 33 |
| 03 | 03 | 4(1) | 5(1) | | 5(1) | 5(1) | | | | 1(4) | | | 4(2) | 9(1) | 10(1) | 4(2)<br>1(4) | 24 | 31 |
| 04 | 04 | 5(1) | 5(1) | | 3(1) | 4(1) | 3(2) | | 5(1) | | | | 1(4) | 8(1) | 14 | 3(2)<br>1(4) | 25 | 31 |
| 05 | 05 | | 10(1) | | | 9(1) | | | 4(1) | | | | 1(4) | | 23(1) | 1(4) | 24 | 25 |
| 06 | 06 | 5(1) | 5(1) | | 4(1) | 5(1) | | | 3(1) | | | | 3(2) | 9(1) | 13(1) | 3(2) | 25 | 28 |
| 07 | 07 | 5(1) | | | 3(1) | 5(1) | | | | 2(2) | | 3(1) | 2(2) | 8(1) | 8(1) | 5(2) | 21 | 26 |
| 08 | 08 | 5(1) | 2(1) | | | 4(1) | 5(1) | | | | | | 4(2) | 5(1) | 11(1) | 4(2) | 20 | 20 |
| 09 | 09 | 3(1) | 6(1) | | | 5(1) | | | | 2(2) | | | 1(2) | | 14(1) | 3(2) | 19 | 22 |
| 10 | 10 | | 4(1) | | | 5(1) | | 4(1) | | 1(4) | | | | 4(1) | 11(1) | 1(4)<br>3(2) | 19 | 27 |
| 11 | 11 | 3(1) | 4(1) | | | 10(1) | | | | 4(2) | | | 4(2) | 3(1) | 14(1) | 8(2) | 25 | 29 |
| 12 | 12 | | 4(1) | | | 5(1) | | | 3(1) | | | 6(1) | | 3(1) | 15(1) | 4(2)<br>1(4) | 23 | 28 |
| 13 | 13 | 5(1) | 2(1) | | 3(1) | | | | 3(1) | 2(2) | | | 3(2) | 5(1) | 8(1) | 5(2) | 18 | 23 |
| 14 | 14 | 5(1) | 4(1) | | 2(1) | 2(1) | | | | 1(3) | | | 2(2) | | | 2(2)<br>1(3) | 16 | 20 |
| 15 | 15 | 5(1) | | | | 4(1) | 1(2) | | 2(1) | 1(5) | | 3(1) | 2(2) | | | 1(5)<br>3(2) | 18 | 24 |
| 16 | 16 | 4(1) | 2(1) | | 5(1) | 3(1) | | | 4(1) | | | | 1(2) | 9(1) | 9(1) | 1(2) | 19 | 20 |

## ಕಲಿಕಾ ಫಲಗಳು/ಕಲಿಕಾ ಸಾಮರ್ಥ್ಯಗಳು

| ಕ್ರ. ಸಂ | ಘಟಕ | ಪಾಠ/ಪದ್ಯಗಳ ಹೆಸರು | ಕಲಿಕಾ ಫಲಗಳು/ಕಲಿಕಾ ಸಾಮರ್ಥ್ಯಗಳು |
|---|---|---|---|
| 1 | ಭಾಗ– 01 | ತುತ್ತೂರಿ (ಪದ್ಯ) | 1. ಸೇವೆಯ ಮಹತ್ವವನ್ನು ಅರ್ಥೈಸಿಕೊಳ್ಳುವರು.<br>2. ಕೃತಜ್ಞತ ಭಾವನೆಯನ್ನು ಬೆಳೆಸಿಕೊಳ್ಳುವರು.<br>3.ಆಲಿಸಿದ ವಿಷಯ ವಸ್ತು (ಕಥೆ ಕವಿತೆ ಪ್ರಾಸ) ಗಳನ್ನು ಕುರಿತು ಮಾತನಾಡುತ್ತಾರೆ ಹಾಗೂ ತಮ್ಮ ಅಭಿಪ್ರಾಯ ನೀಡುತ್ತಾರೆ, ಪ್ರಶ್ನಿಸುತ್ತಾರೆ, ಪ್ರಶ್ನೆ ಕೇಳುತ್ತಾರೆ, ತನ್ನ ಅನಿಸಿಕೆ ಅಭಿಪ್ರಾಯ ಹೇಳುತ್ತಾರೆ, ಸಂವಾದದಲ್ಲಿ ಪಾಲ್ಗೊಳ್ಳುತ್ತಾರೆ |
| 2 | | ನನ್ನ ಕನಸು | 1. ಆಲಿಸುವುದು ಮತ್ತು ಮಾತನಾಡುವುದು<br>2.ಜೀವನದಲ್ಲಿ ದೂರದೃಷ್ಠಿಯ ಮಹತ್ವವನ್ನು ತಿಳಿಯುವರು 3.ವರ್ಣಮಾಲೆ ಅಕ್ಷರಗಳ ಆಕಾರ ಮತ್ತು ಧ್ವನಿಯನ್ನು ಗುರುತಿಸಿ ಓದುತ್ತಾರೆ ಮತ್ತು ಬರೆಯುತ್ತಾರೆ. |
| 3 | | ಸ್ವಾತಂತ್ರ್ಯ ದಿನಾಚರಣೆ | 1. ಕವಿತೆಗಳನ್ನು ಆಲಿಸಿ ಆನಂದಿಸುವರು.2<br>2. ಶಿಕ್ಷಕರು ಕೈ ಬೆರಳುಗಳನ್ನು ತೋರಿಸುತ್ತಾ ಎಣಿಸಿ ಹೇಳಲು ತಿಳಿಸುವುದು (ಜ್ಞಾನ)<br>3.ಭಾಷೆಯ ಪ್ರಾಸ, ಲಯ ಹಿಡಿದು ಆಟ ಆಡುವುದನ್ನುಆನಂದಿಸುವುದನ್ನು ಮಾಡುತ್ತಾರೆ. ಉದಾಹರಣೆಗೆ ಅಣ್ಣ ರನ್ನ ಚಿನ್ನ ಮುನ್ನ ಇತ್ಯಾದಿ |
| 4 | | ಕಂದ (ಪದ್ಯ) | 1. ಸಂಭಾಷಣೆಯಲ್ಲಿ ಪಾಲ್ಗೋಳ್ಳುವುದು<br>2. ಕ್ಷೇತ್ರ : ಮಾತನಾಡುವುದು ಸಾಮರ್ಥ್ಯ<br>3.ವಿವಿಧ ಉದ್ದೇಶಗಳಿಗನುಸಾರವಾಗಿ ತಮ್ಮ ಭಾಷೆ /ಶಾಲೆಯ ಭಾಷೆ ಪ್ರಯೋಗ ಮಾಡುತ್ತಾರೆ. |
| 5 | | ಚಿಗುರು | 1. ಕ್ಷೇತ್ರ: ಬರೆಯುವ ಕೌಶಲ್ಯ.<br>2. ಮುದ್ರಿತ ಅಕ್ಷರ ಸಾಮಗ್ರಿಗಳಲ್ಲಿ ಚಿತ್ರಗಳನ್ನು ಗುರುತಿಸುತ್ತಾರೆ, ಓದುತ್ತಾರೆ. ಮುದ್ರಿತಾ ಬರವಣಿಗೆ ಮತ್ತು ಮುದ್ರಿತ ಚಿತ್ರಗಳನ್ನು ಗುರುತಿಸುತ್ತಾರೆ. |
| 6 | | ಈಸೂರು ಸ್ವಗತ | 1. ಕವನಗಳನ್ನು ಆಲಿಸಿ ಆನಂದಿಸುವರು.<br>2. ಕ್ಷೇತ್ರ : ಆಲಿಸುವುದು ಮತ್ತು ಮಾತನಾಡುವುದು. 3.ಸಂದರ್ಭಗಳ ಸಹಾಯದಿಂದ ಆಸು ಪಾಸಿನಲ್ಲಿ ಸಿಗುವ ಮುದ್ರಿತ ಸಾಮಗ್ರಿಯ ಅರ್ಥ ಮತ್ತು ಉದ್ದೇಶಗಳನ್ನು ಊಹೆ ಮಾಡುತ್ತಾರೆ. |
| 7 | | ಪ್ರಾಮಾಣಿಕ ಬಾಲಕ | 1. ಕ್ಷೇತ್ರ : ಮಾತನಾಡುವುದು<br>2. ಸಂಭಾಷಣೆಯಲ್ಲಿ ತೊಡಗುವರು<br>( ಕೋತಿ ಮತ್ತು ಅಳಿಲು) : ಕಥೆಯನ್ನು ಮಕ್ಕಳು ತಮ್ಮದೇ ಧಾಟಿಯಲ್ಲಿ ಹೇಳುವರು.<br>3.ಭಾಷೆಯ ಪ್ರಾಸ, ಲಯ ಹಿಡಿದು ಆಟ ಆಡುವುದನ್ನು ಆನಂದಿಸುವುದನ್ನು ಮಾಡುತ್ತಾರೆ |
| | | ಸಂಕ್ರಾಂತಿ | 1. ಕ್ಷೇತ್ರ: ಓದುವುದು ಮತ್ತು ಬರೆಯುವುದು<br>2. ಸರಳ ಪದಗಳು ಹಾಗೂ ಅಕ್ಷರಗಳನ್ನು ಓದಲು ಮತ್ತು ಬರೆಯಲು |

| | | | |
|---|---|---|---|
| 8 | | | ತಿಳಿಯುವರು.<br>3.ಮುದ್ರಿತ ಅಕ್ಷರ ಸಾಮಗ್ರಿಗಳಲ್ಲಿ ಚಿತ್ರಗಳನ್ನು ಗುರುತಿಸುತ್ತಾರೆ, ಓದುತ್ತಾರೆ. ಮುದ್ರಿತಾ ಬರವಣಿಗೆ ಮತ್ತು ಮುದ್ರಿತ ಚಿತ್ರಗಳನ್ನು ಗುರುತಿಸುತ್ತಾರೆ. |
| 9 | | ಭಗೀರಥ | 1. ಕ್ಷೇತ್ರ: ಆಲಿಸುವ ಕೌಶಲ<br>2. ತಾಯಿಯ ಪ್ರೀತಿ ಹಾಗೂ  ಆರೈಕೆಯ ವಿಧಾನವನ್ನು ತಿಳಿದುಕೊಳ್ಳುವರು.<br>3 ಆಲಿಸಿದ ವಿಷಯ ವಸ್ತು (ಕಥೆ ಕವಿತೆ ಪ್ರಾಸ) ಗಳನ್ನು ಕುರಿತು ಮಾತನಾಡುತ್ತಾರೆ ಹಾಗೂ ತಮ್ಮ ಅಭಿಪ್ರಾಯ ನೀಡುತ್ತಾರೆ, ಪ್ರಶ್ನಿಸುತ್ತಾರೆ, ಪ್ರಶ್ನೆ ಕೇಳುತ್ತಾರೆ, ತನ್ನ ಅನಿಸಿಕೆ ಅಭಿಪ್ರಾಯ ಹೇಳುತ್ತಾರೆ, |
| 10 | | ಮೃಗಾಲಯದಲ್ಲಿ ಒಂದು ದಿನ | 1. ಗುಣಿತಾಕ್ಷರಗಳು ಹಾಗೂ ಅವುಗಳ ಮಹತ್ವವನ್ನು ತಿಳಿಯುವರು.<br>2. ಮುದ್ರಿತ ಅಕ್ಷರ ಸಾಮಗ್ರಿಗಳಲ್ಲಿ ಚಿತ್ರಗಳನ್ನು ಗುರುತಿಸುತ್ತಾರೆ, ಓದುತ್ತಾರೆ. ಮುದ್ರಿತಾ ಬರವಣಿಗೆ ಮತ್ತು ಮುದ್ರಿತ ಚಿತ್ರಗಳನ್ನು ಗುರುತಿಸುತ್ತಾರೆ. |
| 11 | | ಜಾತ್ರೆ | 1. ಸ್ವಾಮಿ ವಿವೇಕಾನಂದರ ಜೀವನ ಸುಧಾರಣಾ ಕೆಲಸಗಳನ್ನು ತಿಳಿದುಕೊಳ್ಳುವರು.<br>2. ಕ್ಷೇತ್ರ: ಆಲಿಸುವ, ಓದುವ ಕೌಶಲ<br>3.ಅಕ್ಷರ, ಪದ, ಸರಳ ವಾಕ್ಯಗಳನ್ನು ಸರಿಯಾದ ಗಾತ್ರ ಅಂತರದೊಂದಿಗೆ ಬರೆಯುತ್ತಾರೆ ಮತ್ತು ಓದುತ್ತಾರೆ |
| 12 | | ಅನಾರೋಗ್ಯದ ಸಿಂಹ | 1. ಪದ ಹಾಗೂ ಅಕ್ಷರದಲ್ಲಿ ಒತ್ತಕ್ಷರದ ಮಹತ್ವವನ್ನು ತಿಳಿಯುವರು.<br>2. ಬರೆದ ಮುದ್ರಿತ ರೂಪದಲ್ಲಿರುವ ಅಕ್ಷರ, ಶಬ್ದ ಮತ್ತು ವಾಕ್ಯಗಳ ಅಂಶಗಳನ್ನು ಗುರುತಿಸುತ್ತಾ, ಮುದ್ರಿತ ರೂಪದಲ್ಲಿರುವ ಅಕ್ಷರ, ಶಬ್ದ ಮತ್ತು ವಾಕ್ಯಗಳ ಅಂಶಗಳನ್ನು ಗುರುತಿಸುತ್ತಾರೆ |
| 13 | ಭಾಗ–02 | ಹೊಯ್ಸಳ | 1. ಮಕ್ಕಳು ಹಣ್ಣುಗಳ ಪರಿಚಯವನ್ನು ಸ್ಮರಿಸಿಕೊಳ್ಳುವರು.<br>2. . ಸರಳ ಪ್ರಶ್ನೆಗಳಿಗೆ ಹೌದು ಇಲ್ಲ ಅಥವಾ ಒಂದು ಪದದ ಮೂಲಕ ಉತ್ತರಿಸುತ್ತಾರೆ ಮತ್ತು ಪ್ರಶ್ನಿಸುವ ಕೌಶಲ ಬೆಳೆಸಿಕೊಳ್ಳುತ್ತಾರೆ. ತಾನೇ ರಚಿಸಿದ ಚಿತ್ರದ ಕೆಳಗೆ ಅದರ ಹೆಸರನ್ನು ಬರೆಯುತ್ತಾರೆ |
| 14 | | ರಾಜನ ಸುಪ್ರಭಾತ | 1. ಕ್ಷೇತ್ರ : ಆಲಿಸುವ ಕೌಶಲ್ಯ.<br>2. ಮೊಲದ ಜೀವನ ಶೈಲಿಯನ್ನು ತಿಳಿಯುವರು<br>3.ಚಿತ್ರಗಳ ಸೂಕ್ಷ್ಮ ಮತ್ತು ಪ್ರತ್ಯಕ್ಷ ಅಂಶಗಳ ಮೇಲೆ ಆಳವಾಗಿ ಅವಲೋಕನ ಮಾಡುತ್ತಾರೆ. ಚಿತ್ರವೊಂದರ ಪ್ರತ್ಯಕ್ಷ ವಿಷಯ ಮತ್ತು ಸೂಕ್ಷ್ಮ ವಿವರಗಳನ್ನು ಅವಲೋಕಿಸುತ್ತಾರೆ |
| 15 | | ಆಡೋಣ ಬಾ | 1. ಓದುವ ಕೌಶಲ<br>2. ಮಕ್ಕಳು ಕಲಿಯಬೇಕಾದ ಸಂಸ್ಕಾರಗಳ ಬಗ್ಗೆ ಅರ್ಥೈಸಿಕೊಳ್ಳುವರು<br>3.ತನ್ನ ಆಸು ಪಾಸಿನಲ್ಲಿ ತನ್ನ ಕೈಗೆ ಸಿಗುವ ತನಗೆ ಕಾಣಿಸುವ ಮುದ್ರಿತ ಅಕ್ಷರಗಳನ್ನು ಸಾಂದರ್ಭಿಕವಾಗಿ ಹೋಲಿಸಿ, ಅದರ ಅರ್ಥ ಮತ್ತು ಉದ್ದೇಶಗಳನ್ನು ಅಂದಾಜಿಸುತ್ತಾರೆ |
| 16 | | ಮುಳುಗದ ಸೂರ್ಯ | 1. ಕ್ಷೇತ್ರ  ಆಲಿಸುವ ಮತ್ತು ಓದುವ ಕೌಶಲ್ಯ.2.<br>2. ದೈನಂದಿನ ಉತ್ತಮ ಅಭ್ಯಾಸಗಳನ್ನ ಕಲಿತುಕೊಳ್ಳುವರು<br>3. ತ್ಯಕ್ಷ ವಿಷಯ ಮತ್ತು ಸೂಕ್ಷ್ಮ ವಿವರಗಳನ್ನು ಅವಲೋಕಿಸುತ್ತಾರೆ. |

## ಪಾಠ-1 ತುತ್ತೂರಿ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಬರೆಯಿರಿ.** **1*5=05**

1. ಕಸ್ತೂರಿಯು ಯಾವ ತುತ್ತೂರಿಯನ್ನು ಕೊಂಡನು ?
2. ತುತ್ತೂರಿಯನ್ನು ಕಸ್ತೂರಿಯು ಹೇಗೆ ಊದಿದನು ?
3. ಕಸ್ತೂರಿಯು ಯಾವ ರೀತಿಯಲ್ಲಿ ನಡೆದನು ?
4. ತುತ್ತೂರಿಯು ಎಲ್ಲಿಗೆ ಜಾರಿತು ?
5. ಈ ಪದ್ಯನ್ನು ಬರೆದವರು ಯಾರು ?

**II. ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.** **51*5=05**

6. ಹಣ, ಕಾಸು, ರೊಕ್ಕ, ದಿಕ್ಕು
7. ಬೆಟ್ಟ, ಕೆರೆ, ಕೊಳ, ನದಿ
8. ಅಪ್ಪ, ಅಮ್ಮ, ಶಿಕ್ಷಕ, ತಮ್ಮ
9..ಕೋಳಿ, ನವಿಲು, ಪಾರಿವಾಳ, ಸಿಂಹ
10 . ರೊಟ್ಟಿ, ಮಿಠಾಯಿ, ಶೇಂಗಾ ಚಿಕ್ಕಿ, ಮೈಸೂರು ಪಾಕ

**III. ಈ ಕೆಳಗಿನ ಪದಗಳಿಗೆ ಅರ್ಥ ಬರೆಯಿರಿ.** **4*1=04**

11. ಜಂಭ 12. ಹಾಳಾಗ 13 ಸದ್ದು 14. ತುತ್ತೂರಿ

**IV. ಹೊಂದಿಸಿ ಬರೆಯಿರಿ** **4*1=04**

| | A | | B |
|---|---|---|---|
| 15. | ಪಾಲು + ಆಯ್ತು | = | ಗೋಳಾಯ್ತು |
| 16. | ಬೋಳು+ ಆಯ್ತು | = | ಹಾಳಾಯ್ತು |
| 17. | ಹಾಳು + ಆಯ್ತು | = | ಬೋಳಾಯ್ತು |
| 18. | ಗೋಳು + ಆಯ್ತು | + | ಪಾಲಾಯ್ತು |

**V. ಈ ಪದ್ಯದಲ್ಲಿ ಬರುವ ನಾಲ್ಕು ಪ್ರಾಸ ಪದಗಳನ್ನು ಬರೆಯಿರಿ** **1*4=4**

**(ಗೋಳಾಯ್ತು, ಕಸ್ತೂರಿ, ರೀತಿಯಲಿ, ಇಲ್ಲೆಂದ )**

19.ತುತ್ತೂರಿ
20. ಇದೆಯೆಂದ
21. ಬೀದಿಯಲಿ
22. ಬೋಳಾಯ್ತು

**VI. ಈ ಕೆಳಗಿನ ಚಟುವಟಿಕೆಗಳನ್ನು ಮಾಡಿರಿ.** **3*1=03**

23. ಹಸಿ ತೆಂಗಿನಗರಿಯನ್ನು ಉಪಯೋಗಿಸಿ ಒಂದು ತತ್ತೂರಿ (ಪೀಪಿ) ಯನ್ನು ತಯಾರಿಸಿರಿ

**VII. ಈ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.** **4*1=04**

24. ಬಣ್ಣದ ತಗಡಿನ __________

_______________ ಕಸ್ತೂರಿ

ಸರಿಗಮ _______________

_____________ ಊದಿದನು

## ಪಾಠ-02 ನನ್ನ ಕನಸು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ/ವಾಕ್ಯದಲ್ಲಿ ಉತ್ತರಿಸಿರಿ.** **5*1=05**

1. ಕಾಡಿಗೆ ಮರ ಕಡಿಯಲು ಬಂದವರು ಯಾರು ?
2. ಮಾನವ ಯಾರನ್ನು ಅಂಜುಬುರುಕ ಪ್ರಾಣಿ ಎಂದು ಹೇಳುತ್ತಾರೆ. ?
3. ಕೋತಿ ಮಾನವನನ್ನು ಏನೆಂದು ಪ್ರಶ್ನಿಸಿತು ?
4. ಯಾವ ಪ್ರಾಣಿಯು ಮಾನವನನ್ನು ಅವಿವೇಕಿ ಎಂದು ಹೇಳಿತು.?
5. ಕೊಂಬೆಯನ್ನು ಹಿಡಿದು ಜ೦ತಾಡುತ್ತಿದ್ದ ಪ್ರಾಣಿ ಯಾವುದು ?

**II. ಈ ಮಾತುಗಳನ್ನು ಯಾರು ಯಾರಿಗೆ ಹೇಳಿದರು** **5*1=05**

6. "ಇದರಲ್ಲಿ ನಿಮ್ಮ ಸ್ವಂತಿಕೆ ಏನು ?"
7." ಏ ಮಾನವ ! ನಿನಗಿನ್ನು ಬುದ್ಧಿ ಬರಲಿಲ್ಲವೇ ?"
8. " ನಾವು ಕಟ್ಟಿರುವ ಮನೆಗಳನ್ನು ಬಗ್ಗೆ ಬಂದು ನೋಡಿ"
9. "ರಾಜ, ಏಳೋ, ಶಾಲೆಗೆ ತಡವಾಗುತ್ತದೆ."
10. "ಹೌದು, ನಿಜವಾಗಿಯೂ ಇದು ಒಳ್ಳೆಯ ಕನಸೇ ?'

**III. ಈ ಪದಗಳಿಗೆ ಅರ್ಥ ಬರೆಯಿರಿ.** **3*1=03**

11. ಚಿತ್ತಾರ = 12. ಕಲರವ =

13. ಮೂದಲಿಸು =

**IV. ಈ ಪದಗಳಿಗೆ ಟಿಪ್ಪಣಿ ಬರೆಯಿರಿ.** **3*2=06**

14 ಸಾಲು ಮರದ ತಿಮ್ಮಕ್ಕ :

15. ವಲಸೆ :

16. ಅತೀವೃಷ್ಠಿ :

**V. ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.** **5*1=05**

17. ಮುಂಜಾನೆ * 18 ಅತೀವೃಷ್ಠಿ *

19. ಸುಖ * 20 ಅಂಜುಬುರುಕ *

21. ಮೊದಲು *

**VI. ಈ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **4*2=08**

22. ಆ ಮೊಲವು ಮಾನವನನ್ನು ಅವಿವೇಕಿ ಎಂದು ಳಿದ್ದು ಏಕೆ?
23. ರಾಜ ಕಂಡ ಕನಸೇನು ?
24. ಮರವು ಸಾಲುಮರದ ತಿಮ್ಮಕ್ಕನನ್ನು ಕುರಿತು ಏನು ಹೇಳಿತು ?
25. ಜಿಂಕೆಯು ಮಾನವನಿಗೆ ಏನೆಂದು ಬುದ್ದಿವಾದ ಹೇಳಿತು ?

**VII. 26. ಪಾಣಿ ಪಕ್ಷಿಗಳಿಂದ ಕೂಡಿದ ಒಂದು ಸುಂದರವಾದ ಪರಿಸರದ ಚಿತ್ರ ಬರೆದು ಬಣ್ಣ ತುಂಬಿರಿ.** **1*4=04**

# ಪಾಠ- 03 ಸ್ವಾತಂತ್ರ್ಯ ದಿನಾಚರಣೆ

**I.ಹೊಂದಿಸಿ ಬರೆಯಿರಿ** **4*1=04**

| A | B |
|---|---|
| 1. ಸ್ವಾತಂತ್ರ್ಯ ದಿನಾಚರಣೆ | ಜನವರಿ-26 |
| 2. ಗಾಂಧಿ ಜಯಂತಿ | ನವಂಬರ್-14 |
| 3. ಕನ್ನಡ ರಾಜ್ಯೋತ್ಸವ | ಅಕ್ಟೋಬರ್-02 |
| 4. ಮಕ್ಕಳ ದಿನಾಚರಣೆ | ನವಂಬರ್ -01 |

**II. ಖಾಲಿ ಬಿಟ್ಟ ಜಾಗವನ್ನು ಸರಿಯಾದ ಪದಗಳಿಂದ ತುಂಬಿರಿ.** **5*1=05**

**(ಶೌರ್ಯ, ಸಮೃದ್ಧಿ, ಮೂರು, ಕಾಂತಿ, ಮಹಾತ್ಮ ಗಾಂಧಿ)**

5. ನಮ್ಮ ರಾಷ್ಟ್ರ ಧ್ವಜದಲ್ಲಿ ______ ಬಣ್ಣಗಳಿವೆ.
6. ಕೇಸರಿ ಬಣ್ಣದ ಅರ್ಥ _____
7. ಬಿಳಿಯ ಬಣ್ಣದ ಅರ್ಥ _____
8. ಹಸಿರು ಬಣ್ಣದ ಅರ್ಥ ______
9. ನಮ್ಮ ರಾಷ್ಟ್ರ ಪಿತ _______

**III. ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ** **5*1=05**

10. ಶಿಸ್ತು : ________________________________
11. ಸ್ಪರ್ಧೆ : _______________________________
12. ತಳಿರುತೋರಣ : _______________________
13. ಬಹುಮಾನ : __________________________
14. ಕೈತೋಟ :____________________________

**IV. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಬರೆಯಿರಿ.** **5*1=05**

15. ನಮ್ಮ ದೇಶ ಯಾವುದು ?
16. ನಮ್ಮ ದೇಶ ಯಾವಾಗ ಸ್ವಾತಂತ್ರ್ಯ ಪಡೆಯಿತು ?
17. ನಮ್ಮ ರಾಷ್ಟ್ರ ಗೀತೆ ಯಾವುದು ?
18. ಮುಖ್ಯ ಗುರುಗಳು ಯಾವ ಸಭೆ ಕರೆದರು ?
19. ಮೂರನೇ ತರಗತಿಯವರು ಯಾವ ಕೆಲಸ ಮಾಡಲು ಒಪ್ಪಿದರು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **4*2=08**

20. ನಿಮ್ಮ ಶಾಲೆಗಳಲ್ಲಿ ಆಚರಿಸುವ ದಿನಾಚರಣೆಗಳನ್ನು ಪಟ್ಟಿ ಮಾಡಿರಿ.
21. ಸ್ವಾತಂತ್ರ್ಯ ದಿನಾಚರಣೆಯನ್ನು ಏಕೆ ಆಚರಿಸುತ್ತಾರೆ.
22. ಸ್ವಾತಂತ್ರ್ಯ ದಿನಾಚರಣೆಗಾಗಿ ಯಾವ ಯಾವ ಸಿದ್ಧತೆ ಮಾಡಿಕೊಳ್ಳಬೇಕು .
23. ಸ್ವಾತಂತ್ರ್ಯ ದಿನಾಚರಣೆಯಂದು ಯಾವ ಯಾವ ಕಾರ್ಯಕ್ರಮಗಳು ಜರುಗಿದವು.

**VI. 24.ನಮ್ಮ ರಾಷ್ಟ್ರಧ್ವಜದ ಚಿತ್ತರ ಬಿಡಿಸಿ ಬಣ್ಣ ಹಚ್ಚಿರಿ** **1*4=04**

## ಪಾಠ-04. ಕಂದ (ಪದ್ಯ)

**I. ಈ ಕೆಳಗಿನ ಪದಗಲಿಗೆ ಅರ್ಥ ಬರೆಯಿರಿ.** **5*1=05**

1. ಕೂಸು =
2. ಚಂದ್ರಮ =
3. ಕುಡಿ =
4. ಎಸಳು =
5. ಅಂಗಾಲು =

**II. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.** **4*1=04**

6. ಕೂಸು ಇದ್ದಮನೆಗೆ ಯಾವುದು ಬೇಡ ಎಂದು ತಾಯಿ ಹೇಳಿದ್ದಾಳೆ ?
7. ಅಳುವ ಕಂದನ ತಯಟಿಯನ್ನು ಯಾವುದಕ್ಕೆ ಹೋಲಿಸಲಾಗಿದೆ.
8. ಅಳುವ ಕಂದನ ಕಣ್ಣಿನ ನೋಟವನ್ನು ಹೇಗಿರುತ್ತದೆ.
9. ಮಗು ಏನನ್ನು ತಂದು ನಿಲ್ಲಿಸೆಂದು ಕೇಳುತ್ತದೆ ?

**III. ಈ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.** **4*1=04**

10. ಆಡಿ ಬಾ ಎನ ಕಂದ _____ _________
11. ಅಳುವ ಕಂದನ ತುಟಿಯು ___________
12. ಕೂಸು ಇದ್ದ ಮನೆಗೆ ____________
13. ಕಂದಾನ ಕಿರಿಕಿರಿ _______________

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ** ಉತ್ತರಿಸಿರಿ. **3*2=06**

14. ಕೂಸು ಇದ್ದ ಮನೆಗೆ ಬೀಸಣಿಕೆ ಬೇಡ ಏಕೆ ?
15. ಆಡಿ ಬರುವ ಕಂದನನ್ನು ತಾಯಿ ಹೇಗೆ ಉಪಚರಿಸಿದಳು ?
16. ಅಳುವ ಕಂದನ ತುಟಿ ಮತ್ತು ಕುಡಿ ಹುಬ್ಬನ್ನು ತಾಯಿ ಹೇಗೆ ವರ್ಣಿಸಿದ್ದಾಳೆ ?

**V. ಈ ಪದ್ಯದಲ್ಲಿ ಬರುವ ಐದು ಒತ್ತಕ್ಷರಗಳಿರುವ ಪದಗಳನ್ನು ಆರಿಸಿ ಬರೆಯಿರಿ.** **4*1=04**

17. ______________
18. _____________
19. __________
20. _____________
21. _______________

**VI. ಈ ಪದಗಳಿಗೆ ನಿಮಗೆ ತಿಳಿದಿರುವ ಎರಡೆರಡು ಸಮನಾರ್ಥಕ** ಪದಗಳನ್ನು ಬರೆಯಿರಿ . **4*1=04**

22. ಕೂಸು _____ _______
23. ತಾಯಿ _______ ________
24. ಬಂಗಾರ ________ ________

**VII. 26. ನಿಮಗೆ ತಿಳಿದಿರುವ/ ತಿಳಿದಿರುವ ಒಂದು ಜಾನಪದ ಹಾಡನ್ನು ಬರೆಯಿರಿ.** **1*4=04**

**ಹಾಡನ್ನು ಬರೆಯಿರಿ.**

# ಗದ್ಯ ಪಾಠ-5 ಚಿಗುರು

**I. ಬಿಟ್ಟ ಸ್ಥಳಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ.** **5*1=05**

**( ಸಂತಸಗೊಂಡರು, ಮುದ್ರಿತ, ಗಾತ್ರ, ಲೇಖನ, ಪತ್ರಿಕೆ )**

1. ಸಂಪಾದಕ ಮಂಡಳಿಯವರು ವಿದ್ಯಾರ್ಥಿಗಳಿಂದ ಬಂದ ________ ಗಳನ್ನು ಪರಿಶೀಲಿಸಿದರು.
2. ರಾಧಾ ____________ಯನ್ನು ನೋಡಿದಳು
3. ಗಾಯತ್ರಿ ಬರೆದಿರುವ ಅಕ್ಷರಗಳು _______________ಆಕಾರದಲ್ಲಿಲ್ಲ'
4. ಅಕ್ಷರಗಳನ್ನು ಒಂದೇ __________ ದಲ್ಲಿ ಬರೆಯಬೇಕು.
5. ವಿದ್ಯಾರ್ಥಿಗಳು ಚೆನ್ನಾಗಿ ಬರೆಯುವ ಕ್ರಮ _______

**II. ಹೊಂದಿಸಿ ಬರೆಯಿರಿ.** **4*1=04**

| A | B |
|---|---|
| 6. ಮೊಲ | ಸ್ವಾಮಿ ವಿವೇಕಾನಂದ |
| 7. ಥಾಮಸ್ | ನಿಮಗಿದು ತಿಳಿದಿರಲಿ |
| 8. ಬೇಗಂ | ನಾಡಹಬ್ಬ |
| 9. ವಿನಾಯಕ | ಗಾದೆ |

**III. ಸರಿ, ತಪ್ಪು ಗುರುತಿಸಿ.** **3*1=03**

10. ತಪ್ಪಿಲ್ಲದೆ ಚೆನ್ನಾಗಿ ಕಾಣುವ ರೀತಿಯಲ್ಲಿ ಬರೆಯಬೇಕು ( )
11. ಸುಲಭವಾಗಿ ಓದಲು ಬಾರದ ರೀತಿಯಲ್ಲಿ ಬರೆಯಬೇಕು ( )
12. ಪದಗಳಲ್ಲಿನ ಅಕ್ಷರಗಳನ್ನು ಒಂದೇ ಗಾತ್ರದಲ್ಲಿ ಬರೆಯಬಾರದು ( )

**IV. ಈ ಸಾಲುಗಳನ್ನು ಸರಿಯಾದ ರೀತಿಯಲ್ಲಿ ಬರೆಯಿರಿ.** **4*1=04**

13. ನಾಡ/ ನಮ್ಮ/ ಹಬ್ಬ/ ದಸರಾ/ : ________________________________
14. ಮಾತು/ ಜಗಳವಿಲ್ಲ/ ಬಲ್ಲವನಿಗೆ " ______________________________
15. ರಾಜ್ಯ/ ನಮ್ಮ/ ಕರ್ನಾಟಕ : _________________________________
16. ಹಣ್ಣುಗಳ/ ಮಾವು/ ರಾಜ : __________________________________

**V. ಒಂದು ವಾಕ್ಯದಲ್ಲಿ ಉತ್ತರಿಸಿರಿ.** **5*1=05**

17. ಶಾಲಾ ಪತ್ರಿಕೆಯ ಹೆಸರೇನು ?
18. ನಮ್ಮ ನಾಡ ಹಬ್ಬ ಯಾವುದು ?
19. ವಿವೇಕಾನಂದರ ಬಾಲ್ಯದ ಹೆಸರೇನು ?
20. ಚಿಗುರು ಪತ್ರಿಕೆಯಲ್ಲಿ ನಿಮಗೆ ಇಷ್ಟವಾದ ಬರಹ ಯಾವುದು ?
21. ಚಿಗುರು ಪತ್ರಿಕೆಯಲ್ಲಿ ಸತೀಶ ಬರೆದ ಲೇಖನದ ಹೆಸರೇನು ?

**VI. ಈ ವಾಕ್ಯಗಳನ್ನು ನಕಲು ಮಾಡಿ.** **2*1=02**

22. ಕೋಗಿಲೆಯ ಗಾನ ಇಂಪು

________________________________

23. ಮಾಡಿದ್ದುಣ್ಣೋ ಮಹಾರಾಯ

__________________________________

**VII. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **1*2=02**

24. ನಿಮಗೆ ತಿಳಿದಿರುವ ಮನೆ ಮದ್ದನ್ನು ಬರೆಯಿರಿ.

# ಪಾಠ-6 ಈಸೂರು ಸ್ವಗತ

**I. ಬಿಟ್ಟ ಸ್ಥಳ ವನ್ನು ಸರಿಯಾದ ಪದದಿಂದ ತುಂಬಿರಿ.** **5*1=05**

(ಗುಪ್ತ, ನಿರಾಯುಧ, ಖಾತೆ, ಕಿರ್ದಿ, ದಂಡ, ಈಸೂರು)

1. ಅಧಿಕಾರಿಗಳು ಕಂದಾಯ ವಸೂಲಿಗೆ _______ಪುಸ್ತಕಗಳೊಂದಿಗೆ ಬಂದರು
2. ದೇವಸ್ತಾನದ ಮುಂದೆ ______ಸಭೆ ನಡೆಸಿದರು
3. ಅವರಿಗೆ ಐವತ್ತು ರೂಪಾಯಿ ______ವಿಧಿಸಲಾಯಿತು
4. ಬೇಜವಾಬ್ದಾರಿ ಸರ್ಕಾರಿ ಅಧಿಕಾರಿಗಳಿಗೆ ________________ನಲ್ಲಿ ಪ್ರವೇಶವಿಲ್ಲ
5. ಕೋಪಗೊಂಡ ಅಧಿಕಾರಿಗಳು ______________ ಜನರ ಮೇಲೆ ಲಾಠಿ ಬೀಸಿದರು

**II ವಿರುದ್ಧಾರ್ಥಕ ಪದಗಳನ್ನು ಹೊಂದಿಸಿ ಬರೆಯಿರಿ.** **4*1=04**

| A | B |
|---|---|
| 6. ಆರಂಭ | ಹೇಡಿ |
| 7. ಪ್ರವೇಶ | ಗೆಲುವು |
| 8. ಸೋಲು | ನಿರ್ಗಮನ |
| 9. ಧೀರ | ಮುಕ್ತಾಯ |

**III. ಸರಿ-ತಪ್ಪು ಗುರುತಿಸು ( )** **5*1=05**

10. ಪಟೇಲ್ ಚನ್ನಬಸವಯ್ಯ ಮತ್ತು ಶಾಲುಭೋಗ ರಂಗನಾಥ ರಾಮ್ ಸ್ವತಂತ್ರ ಸರ್ಕಾರದ ಅಧಿಕಾರಿಗಳು ( )
11. ಬ್ರಿಟೀಷ್ ಅಧಿಕಾರಿಗಳು ಗ್ರಾಮ ಪ್ರವೇಶಿಸದಂತೆ ಜನರು ಪ್ರತಿಭಟಿಸಿದರು. ( )
12. ಈಸೂರಿನ ಸ್ವತಂತ್ರ ಸರ್ಕಾರದ ರಕ್ಷಣೆಯನ್ನು ತಿಳಿದ ಬ್ರಿಟೀ಼ ಅಧಿಕಾರಿಗಳು ಸಂತಸಗೊಂಡರು ( )
13. ಕೇಳಿದಿರಲ್ಲ ! ನನ್ನ ಮಡಿಲ ಮಕ್ಕಳ ಧೀರ ಮಾತುಗಳನ್ನು ( )
14. 'ಏಸೂರು ಕೊಟ್ಟರೂ ಈಸೂರು ಬಿಡೆವು' ಎಂಬ ಘೋಷಣೆ ಮತ್ತೊಮ್ಮೆ ಮುಗುಲು ಮುಟ್ಟಲಿಲ್ಲ. ( )

**IV. ಇಲ್ಲಿ ಕೊಟ್ಟಿರುವ ವಾಕ್ಯಗಳನ್ನು ಸರಿಯಾದ ಕ್ರಮಾಕ್ಷರದಲ್ಲಿ ಬರೆಯಿರಿ.** **3*1=03**

15. ಆಳುತ್ತಿದ್ದರು / ಹಿಂದೆ / ಬ್ರಿಟೀಷರು / ಭಾರತವನ್ನು

_______________________________________

16. ಸ್ವಾತಂತ್ರ್ಯ / ಈಸೂರಿನವರು /ಪ್ರೇ ಮಿಗಳು

_______________________________________

17. ನಡೆಸಿದರು / ದೇವಸ್ಥಾನದ / ಸಭೆ / ಮುಂದೆ

_______________________________________

**V. ಒಂದು ವಾಕ್ಯದಲ್ಲಿ ಬರೆಯಿರಿ.** **5*1=05**

18. ಐಸೂರು ಯಾವ ಜಿಲ್ಲೆಯಲ್ಲಿದೆ. ?
19. ಈಸೂರಿನ ಜನತೆ ಯಾರ ಅಧಿಕಾರವನ್ನು ಧಿಕ್ಕರಿಸಿದರು
20. ಅಗಸೆ ಬಾಗಿಲಿನಲ್ಲಿ ಹಾಕಿದ್ದ ಫಲಕದಲ್ಲಿ ಏನೆಂದು ಬರೆದಿತ್ತು ?
21. ಸ್ವಗತ ಎಂದರೇನು ?
22. ಗಾಂಧೀಜಿಯವರು ಆರಂಭಿಸಿದ ಚಳುವಳಿ ಯಾವುದು ?

**VI. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **3*2=06**

23. ಈಸೂರು ಶಿವಮೊಗ್ಗ ಜಿಲ್ಲೆಗೆ ಹೆಸರು ತಂದಿತ್ತು ಕಾರಣ ಕೊಡಿ.
24. ಹೋರಾಟಗಾರ ಯುವಕರು ಅಧಿಕಾರಿಗಳಿಗೆ ಏನೆಂದು ವಿನಂತಿಸಿದರು
25. ಖಾತೆ-ಕಿರ್ದಿ ಪುಸ್ತಕಗಳನ್ನು ಕಸಿದುಕೊಳ್ಳಲು ಕಾರಣವೇನು ?

# ಗದ್ಯ ಪಾಠ-07. ಪ್ರಮಾಣಿಕ ಬಾಲಕ

**I.ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಬರೆ.** **5*1=05**

1. ದಾರಿ ಬದಿಯ ______________ ತೋಪಿನಲ್ಲಿ ಹಣ್ಣುಗಳು ಆಕರ್ಷಿಸಿದವು
   A) ಸೀಬೆ B) ಮಾವು C) ಸೇಬು D) ದ್ರಾಕ್ಷಿ
2. ಮಾಲಿಕನನ್ನು ಕಂಡು _________ ಗಲಿಬಿಲಿಗೊಂಡು ಚೆಲ್ಲಾಪಿಲ್ಲಿಯಾಗಿ ಓಡಿದರು
   A) ಮಕ್ಕಳು B) ಗೃಹಿಣಿಯರು C) ಹಿರಿಯರು D) ಪ್ರಜೆಗಳು
3. ಭಾರತದ _____ ಹೋರಾಟ ಕಾಲ
   A) ಅರಿಯುವ B) ತಿದ್ದಿಕೊಳ್ಳುವ C) ಮತ್ತಷ್ಟು D) ಸ್ವಾಂತ್ರಂತ್ರ್ಯ
4. ಭಾರತ ದೇಶದ ಪ್ರಥಮ ಪ್ರದಾನಿ _____________
   A) ಗಾಂಧೀಜಿ B) ಅಂಬೇಡ್ಕರ್ C) ಜವಾಹರಲಾಲ್ ನೆಹರು D) ಸುಭಾಷ್ ಚಂದ್ರ ಭೋಸ್
5. ಶಾಸ್ತ್ರಿಯವರಲ್ಲಿ _________ ಪುಟಿದೆದ್ದಿತು
   A) ದೇಶಪ್ರೇಮ B) ಪ್ರಾಮಾಣಿಕತೆ C) ಧೀಮಂತಿಕೆ D) ಆಸಕ್ತಿ

**II. ಹೊಂದಿಸಿ ಬರೆಯಿರಿ** **5*1=05**

| A | B |
|---|---|
| 6. ಘೋಷವಾಕ್ಯ | ಸತ್ಯಾಗ್ರಹ |
| 7. ಭಾರತರತ್ನ | ಜೈಜವಾನ್ ಜೈಕಿಸಾನ್ |
| 8. ಚಳುವಳಿ | ಲಾಲ್ ಬಹದ್ದೂರ್ ಶಾಸ್ತ್ರಿ |

**III. ಸ್ವಂತ ವಾಕ್ಯ ರಚಿಸಿ.** **3*1=03**

9. ಮನೆಮಾತಾಗು 10. ಪುಟಿದೇಳು

10. ಆಕರ್ಷಿಸು 12. ಹೊಣೆ ಹೊತ್ತು

**IV. ಒಂದು ವಾಕ್ಯದಲ್ಲಿ ಉತ್ತರಿಸಿರಿ** **5*1=05**

13. ಮಕ್ಕಳು ತೊಪನ್ನು ಏಕೆ ಪ್ರವೇಶಿಸಿದರು ?
14. ಮಕ್ಕಳು ಯಾವ ಹಣ್ಣನ್ನು ಖುಷಿ ಹಂಹಿಕೊಂಡರು
15. ಭಾರತವು ಯಾವ ದಿನದಂದು ಸ್ವತಂತ್ರಯ ದೇಶವಾಯಿತು ?
16. ಮಕ್ಕಳು ಏಕೆ ಗಲಿಬಿಲಿಗೊಂಡರು ?
17. ಮಾಲೀಕನ ಮನಸ್ಸು ಏಕೆ ಕರಗಿತು ?

**VI. ಇಲ್ಲಿ ಕೊಟ್ಟಿರುವ ಮಾತುಗಳನ್ನು ಯಾರು-ಯಾರಿಗೆ ಹೇಳಿದರು** **2*2=04**

18. "ಇನ್ನೆಂದೂ ಇಂತಹ ತಪ್ಪು ಮಾಡುವುದಿಲ್ಲ"
    -ಯಾರು ಹೇಳಿದರು ? ________________________
    ಯಾರಿಗೆ ಹೇಳಿದರು ? _______________________
19. "ನಿನ್ನ ಈ ಗುಣ ನಿನ್ನನ್ನು ದೊಡ್ಡ್ ವ್ಯಕ್ತಿಯನ್ನಾಗಿ ಮಾಡುತ್ತದೆ"
    ಯಾರು ಹೇಳಿದರು ? ________________________
    ಯಾರಿಗೆ ಹೇಳಿದರು ? _______________________

**V.ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **2*2=04**

20. ಬಾಲಕ ಮಾಲೀಕನಿಗೆ ಏನೆಂದು ಹೇಳಿದನು
21. ಶಾಸ್ತ್ರಿಯವರು ಮಂತ್ರಿ ಪದವಿಗೆ ಏಕೆ ರಾಜಿನಾಮೆ ನೀಡಿದರ

# ಪಾಠ-08 ಸಂಕ್ರಾಂತಿ

**I. ಬಿಟ್ಟ ಸ್ಥಳಗಳಿಗೆ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.** **5*1=05**

1.ಹಬ್ಬ ಬಂತು ಹಬ್ಬ ಬಂತು ——————ಹಬ್ಬ

A) ಗೌರಿ B) ಸಂಕ್ರಾಂತಿ C) ವಿಜಯದಶಮಿ D) ಯುಗಾದಿ

2. ಗರಿಮುರಿ ಜರತಾರಿ ____________________ ಹಾಕಿಕೊಂಡು

A) ಲಂಗ B) ಜಡೆ C) ಕುಚ್ಚು D) ಜೆಜ್ಜೆ

3.ಎಳ್ಳು, ಕಬ್ಬು, ಸಕ್ರೆ, ಅಚ್ಚು _________________

A) ಬಾಳೆ-ಹಣ್ಣು-ಬೆಲ್ಲ B) ಸೀಬೆ-ಬೆಲ್ಲ-ಹಣ್ಣು C) ಮಾವಿನ ಹಣ್ಣು-ಬೆಲ್ಲ D) ದ್ರಾಕ್ಷಿ-ಹಣ್ಣು-ಬೆಲ್ಲ

4. ಹೊರಟಿದ್ದಾಳೆ _______ತಂಗಿ

A) ಗೆಳತಿ B) ಜೋಡಿ C) ಪುಟಾಣಿ D) ಅಕ್ಕ

5. ಮಕ್ಕಳನ್ನೆಲ್ಲ ಹಸೆಯಲಿ ಕೂಡಿಸಿ

A) ಅಕ್ಕಿ-ಬೆಲ್ಲ-ಹಣ್ಣು B) ಬೆಲ್ಲ-ಹಣ್ಣು-ಗೋದಿ C) ರಾಗಿ-ಕಬ್ಬು-ಹಣ್ಣು D) ಎಳ್ಳು-ಎಲಿಚಿ-ಅಚ್ಚು

**II. ಹೊಂದಿಸಿ ಬರೆಯಿರಿ .** **4*1=04**

| A | | B |
|---|---|---|
| 6. ಗರಿಮುರಿ ಜರತಾರಿ | - | ಅಕ್ಕಿ-ಬೆಲ್ಲ-ಹಣ್ಣು |
| 7. ಗಿಲಿಗಿಲಿ ಕಾಲಗೆಜ್ಜೆ | - | ಬಾಳೆ-ಹಣ್ಣು-ಬೆಲ್ಲ |
| 8. ಎಳ್ಳು ಕಬ್ಬು | - | ಲಂಗ ಹಾಕಿಕೊಂಡು |
| 9. ಕಿಚ್ಚನು ಹಾಯಿಸಿ | - | ದನಿ ಮಾಡಿಕೊಡು |

**III. ಒಂದು ವಾಕ್ಯದಲ್ಲಿ ಉತ್ತರಿಸಿರಿ.** **5*1=05**

10. ತಂಗಿಯು ಯಾವ ಲಂಗ ಹಾಕಿಕೊಂಡಿದ್ದಳು ?
11. ಗೆಳತಿಯ ಜೊತೆ ತಂಗಿ ಕೇರಿಗೆ ಹೊರಟಿದ್ದು ಏಕೆ ?
12. ಅಪ್ಪ ದನಕರುಗಳಿಗೆ ಏನು ಕೊಟ್ಟರು ?
13. ಮಕ್ಕಳನ್ನು ಹಸೆಯಲ್ಲಿ ಕೂರಿಸಿ ಏನು ಮಾಡುವರು ?
14. 'ಸಂಕ್ರಾಂತಿ' ಪದ್ಯವನ್ನು ಬರೆದವರು ಯಾರು ?

**IV. 'ಸಂಕ್ರಾಂತಿ' ಪಠ್ಯವನ್ನು ಆಧರಿಸಿ ಈ ಘಟನೆಯನ್ನು ಅನುಕ್ರಮವಾಗಿ ಗುರುತಿಸಿ ಬರೆ** **4*1=04**

15. ಮಕ್ಕಳನ್ನು ಹಸೆಯಲ್ಲಿ ಕೂರಿಸಿ, ಎಳ್ಳು-ಎಲಚಿ-ಅಚ್ಚುಗಳನ್ನು ಅಜ್ಜಿ ಸುರಿಯುವರು
16. ಪುಟಾಣಿ ತಂಗಿ ತನ್ನ ಗೆಳತಿ ಜೊತೆ ಎಳ್ಳು, ಬೆಲ್ಲ ಬೀರಲು ಹೊರಟರು.
17. ತಂಗಿಯು ಗಜಮುರಿ ಜರತಾರಿ ಲಂಗ ಹಾಕಿಕೊಂಡಳು.
18. ಎತ್ತು ಹಸು ಕರುಗಳನ್ನು ಕೊಂಬು ಹೆರೆದು ಬಣ್ಣವ ಬಳಿದು ಶೃಂಗಾರ ಮಾಡಿದರು.

**V. ಕೊಟ್ಟಿರುವ ಪದಗಳಿಗೆ ಸ್ತ್ರೀಲಿಂಗ ರೂಪ ಬರೆಯಿರಿ.** **2*1=02**

19. ರಾಜ
20. ಅಣ್ಣ

## ಪಾಠ : 09 ಭಗೀರಥ

**I.ಹೊಂದಿಸಿ ಬರೆಯಿರಿ.** **3*1=03**

| A | B |
|---|---|
| 1. ಗಂಗೆ | ಮಹರ್ಷಿ |
| 2. ಜಹ್ನು | ರಾಜ |
| 3. ಭಗೀರಥ | ನದಿ |

**II. ನಾನಾರ್ಥ ಬರೆಯಿರಿ.** **2*1=02**

4. ಮುನಿ
5. ತರು

**III. ಸರಿಪಡಿಸಿ ಅರ್ಥಗರ್ಭಿತವಾಗಿ ಬರೆಯಿರಿ.** **6*1=06**

6. ತಂತಾದಿರು —
7. ರಭಶ ——
8. ಜ್ಞಾನಿ ——
9. ಅಶಾಧ್ಯ ——
10. ಧೇವಲೋಕ ——
11. ಚಿತಕ್ರಾಂತ ——

**IV. ಒಂದು ವಾಕ್ಯದಲ್ಲಿ ಉತ್ತರಿಸಿರಿ** **5*1=05**

12. ಭಗೀರಥನು ಯಾರಿಗೆ ಸ್ವರ್ಗ ಸಿಗಬೇಕೆಂದು ಚಿಂತಿಸುತ್ತಿದ್ದನು ?
13. ಋಷಿಗಳು ಭಗೀರಥನಿಗೆ ಏನೆಂದು ಹೇಳಿದನು ?
14. ಭಗೀರಥನು ಏಕೆ ತಪಸ್ಸಿಗೆ ಕುಳಿತನು ?
15. ಗಂಗೆ ಭಗೀರಥನಿಗೆ ಏನೆಂದು ಹೇಳಿದಳು ?
16. ಗಂಗೆ ಹರಿಯುವ ರಭಸವನ್ನು ತಡೆದವರು ಯಾರು ?

**V. ಈ ಕೆಳಗೆ ಕೊಟ್ಟಿರುವ ಮಾತನ್ನು ಯಾರು ಯಾರಿಗೆ ಹೇಳಿದರು ?** **2*2=04**

17. "ಗಂಗೆಯನ್ನು ನಾನು ಶಿರದಲ್ಲಿ ಧರಿಸುತ್ತೇನೆ"

ಯಾರು ಹೇಳಿದರು :____________

ಯಾರಿಗೆ ಹೇಳಿದರು : ____________

18. "ನಿನ್ನ ಇಚ್ಚೆಯಂತೆ ನಾನು ಭೂಮಿಗೆ ಬರುತ್ತೇನೆ"

ಯಾರು ಹೇಳಿದರು :____________

ಯಾರಿಗೆ ಹೇಳಿದರು : ____________

**VI. ಎರಡು ವಾಕ್ಯದಲ್ಲಿ ಉತ್ತರಿಸಿರಿ.** **1*2=02**

19. ಭಗೀರಥನ ಕಠಿಣವಾದ ತಪಸ್ಸಿಗೆ ಮೆಚ್ಚಿದ ಶಿವ ಏನೆಂದು ಹೇಳಿದನು ?

# ಪಾಠ -10 : ಮೃಗಾಲಯದಲ್ಲಿ ಒಂದು ದಿನ

**I. ಒಂದು ವಾಕ್ಯದಲ್ಲಿ ಉತ್ತರಿಸಿರಿ.** **7*1=7**

1. ಮಕ್ಕಳು ಮೊದಲು ಏನನ್ನು ಗುರುತಿಸಬೇಕೆಂದು ಹೇಳಿದರು ?
2. ಸೂಚನಾ ಫಲಕಗಳೆಂದರೇನು ?
3. ಶಾಲಾ ವಲಯದಲ್ಲಿದ್ದ ಸೂಚನಾ ಫಲಕದಲ್ಲಿ ಏನೆಂದು ಬರೆಯಲಾಗಿತ್ತು ?
4. ಮೃಗಾಲಯ ಎಂದರೇನು ?
5. ನೀವು ಮRಗಾಲಯವನ್ನು ಎಲ್ಲಿ ನೋಡಿದ್ದೀರಾ ?
6. ಭಿತ್ತಿಪತ್ರ ಎಂದರೇನು ?
7. ನಿಮಗೆ ಇಷ್ಟವಾದ ಸೂಚನಾ ಫಲಕ ಯಾವುದು ?

**II. ಈ ಕೆಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.** **4*1=04**

8. ಜಾಗರೂಕ
9. ಒಳಗೆ
10. ಮುಂದೆ
11. ದೊಡ್ಡದು

**III. ಅಕ್ಷರಗಳನ್ನು ಮಾದರಿಯಂತೆ ಸರಿಯಾದ ಕ್ರಮಾಕ್ಷರದಲ್ಲಿ ಬರೆಯಿರಿ.** 4*1=04

**ಮಾದರಿ : ತ್ರ. ತ್ತಿ. ಭಿ, ಪ. ---- ಭಿತ್ತಿಪತ್ರ**

12. ಕ, ಸೂ, ಫ, ನಾ, ಚ, ಲ —
13. ಯ, ವ, ಶಾ, ಲ, ಲಾ, —
14. ತಿ, ಸು, ತಿಂ, ನಿ, ಸು —
15. ತ, ರಿ, ಹಾ, ಸ್ಯ, ಭ, —

**IV. 16. ಮಾದರಿಯಂತೆ ಬರೆಯಿರಿ.** **1*4=04**

**ಮಾದರಿ :**

| **ಹಾರು** | **ಹಾರುತ್ತಾನೆ** | **ಹಾರಿದನು** |
|---|---|---|
| ಮಾಡು | | |
| ಊದು | | |
| ಹಾಡು | | |
| ಓದು | | |

**V. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **4*2=8**

17. ಸೂಚನಾ ಫಲಕವನ್ನು ಏಕೆ ಹಾಕುತ್ತಾರೆ
18. ಭಿತ್ತಿ ಚಿತ್ರದ ಕುರಿತು ಬರೆಯಿರಿ.
19. ನೀರನ್ನು ಮಿತವಾಗಿ ಬಳಸಬೇಕು ಏಕ

## ಪಾಠ-11 : ಜಾತ್ರೆ

**I. ಕೆಳಗಿನ ಪ್ರಶ್ನೆಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.** **10*1=10**

1. ಊರಿಗೆ ಯಾವುದರ ಸಂಭ್ರಮ ನಡೆಯುತ್ತಿತ್ತು.?
2. ಊರಿನಲ್ಲಿ ಏನು ನಡೆಯುತ್ತಿತ್ತು ?
3. ಊರನ್ನು ಹೇಗೆ ಅಲಂಕರಿಸಿದ್ದರು?
4. ತಾತನ ಜೊತೆ ಯಾರು-ಯಾರು ಜಾತ್ರೆಗೆ ಹೊಗಿದ್ದರು?
5. ರಾಜು ಮತ್ತು ಕಮಲ ಯಾರ ಜೊತೆ ಜಾತ್ರೆಗೆ ಹೊಗೊದ್ದರು?
6. ಜಾತ್ರೆಯಲ್ಲಿ ಜನ ಹೇಗೆ ಸೇರಿದ್ದರು?
7. ಭಕ್ತರು ಏನನ್ನು ಎಳೆಯುವುದನ್ನು ನೋಡುತ್ತಿದ್ದರು?
8. ರಥವನ್ನು ಯಾರು ಎಳೆಯುತ್ತಿದ್ದರು
9. ಜೋಳಿಗೆಯನ್ನು ಎಲ್ಲಿಗೆ ಹಾಕಿಕೊಂಡಿದ್ದರು?
10. ವೊಭೂತಿಯನ್ನು ಎಲ್ಲಿಗೆ ಧರಿಸಿದ್ದರು?

**II. ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.** **3*1=03**

11. A) ಬಳ್ಳಾರಿ B) ಚಾಮರಾಜನಗರ C) ಮೈಸೂರು D) ಮಂಡ್ಯ
12. A) ಜಾಗಟೆ B) ಚಕ್ರಾಕಾರದ ಬಟ್ಟಲು C) ತಾಳ D) ಹಾರ್ಮೋನಿಯಂ
13. A) ಮಂಡ್ಯ B)ದಕ್ಷಿಣ ಕನ್ನಡ C) ಉತ್ತರಕನ್ನಡ D) ಉಡುಪಿ

**III. ಎರಡು ವಾಕ್ಯಗಳಲ್ಲಿ ಉತ್ತರಿಸಿರಿ** **4*1=04**

14. ಕಂಸಾಳೆ ಬಾರಿಸುತ್ತಿರುವವರು ಯಾರು? ಅವರು ಯಾವ ರೀತಿಯ ಉಡುಪನ್ನು ಧರಿಸಿದ್ದರು.
15. ಬೀಸು ಕಂಸಾಳೆ ಎಂದರೇನು?
16. ಕಂಸಾಳೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ಪ್ರದರ್ಶಿಸುತ್ತಾರೆ.?
17. ಯಕ್ಷಗಾನ ಪ್ರದರ್ಶಿಸುವ ಜಿಲ್ಲೆಗಳು ಯಾವುವು?

**IV. ಮೂರು-ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ.** **4*2=08**

18. ನೀವು ನೋಡಿರುವ ಜಾತ್ರೆಯ ಸನ್ನಿವೇಶವನ್ನು ಕುರಿತು ಬರೆಯಿರಿ.
19. ರಂಗಸ್ಥಳ ಹೇಗೆ ಸಿಂಗರಿಸುತ್ತಾರೆ.
20. ಸ್ತುತಿಯನ್ನು ಹಾಡಲು ಆರಂಭಿಸಿದವರು ಯಾರ್ಯಾರು?
21. ಜಾತ್ರೆಯ ದಿನ ಯಾವ ಪ್ರಸಂಗವನ್ನು ಯಕ್ಷಗಾನದವರು ಪ್ರದರ್ಶಿಸಿದರು

**V. ಬಾಯ್ದೆರೆ ಪ್ರಶ್ನೆಗಳು** **4*1=04**

22. ಯಕ್ಷಗಾನದವರ ವೇಷ ಭೂಷಣಗಳನ್ನು ತಿಳಿಸಿರಿ?
23. ' ಮ್ಮ' ಒತ್ತಕ್ಷರದಲ್ಲಿರುವ ವರ್ಣಗಳನ್ನು ತಿಳಿಸಿರಿ
24. ಆಶ್ಚರ್ಯಸೂಚಕ ಚಿಹ್ನೆ ಇರುವ ವಾಕ್ಯಗಳನ್ನು ಪಠ್ಯಪುಸ್ತಕದಲ್ಲಿ ಗುರ್ತಿಸಿ . ಹೇಳಿ
25. ಪ್ರಶ್ನಾರ್ಥಕ ಚಿಹ್ನಗಳಿರಿವ ವಾಕ್ಯವನ್ನು ಪಠ್ಯಪುಸ್ತಕದಲ್ಲಿ ಗುರುತಿಸಿ.ಹೇಳಿ

# ಪಾಠ : 12 ಅನಾರೋಗ್ಯದ ಸಿಂಹ

**I. ಸ್ವಂತವಾಕ್ಯದಲ್ಲಿ ಉತ್ತರಿಸಿರಿ.** **4*1=04**

1. ಕುತೂಹಲ
2. ಬಾರಿಸು
3. ಭಿನ್ನ-ಭಿನ್ನ
4. ಅಭಿನಯ

**II. ಒಂದು ವಾಕ್ಯದಲ್ಲಿ ಉತ್ತರಿಸಿರಿ.** **3*1=03**

5. ಕಾಡಿನರಾಜ ಸಿಂಹಕ್ಕೆ ಏನಾಯಿತು ?
6. ಹಾ// ಜೀಬ್ರಿ ಕಾಡಿನ ರಾಜನನ್ನು ಪರೀಕ್ಷಿಸಿ ಏನೆಂದು ಹೇಳಿತು ?
7. ಡಾ// ಹೈನಾ ಕಾಡಿನರಾಜ ಸಿMನನ್ನು ಪರೀಕ್ಷಿಸಿ ಏನೆಂದಿತು ?
8. ಜಾಣ ವೈದ್ಯ ನರಿ ಕಾಡಿನ ರಾಜ ಸಿಂಹನನ್ನು ಪರೀಕ್ಷಿಸಿ ಏನೆಂದಿತು ?
9. ಈ ಪದ್ಯದ ನೀತಿ ಏನು ?

**III ಸಮಾನಾರ್ಥಕ ಪದ ಬರೆಯಿರಿ.** **3*1=03**

10. ಅಡವಿ —
11. ಕಾಯಿಲೆ —
12. ದುರ್ವಾಸನೆ —

**IV ಕೊಟ್ಟಿರು ಅಕ್ಷರಗಳ/ಪದಗಳನ್ನು ಸ್ಪಷ್ಟವಾಗಿ ಉಚ್ಚಾರ ಮಾಡಿ ಧ್ವನಿ/ ಅರ್ತ ವ್ಯತ್ಯಾಸ ತಿಳಿಸಿ.** **6*1=06**

13. ಅ - ಹ ಅಕ್ಕಿ - ಹಕ್ಕಿ
14. ಅ -ಹಾ ಆದಿ – ಹಾದಿ
15. ನ - ಣ ಅನ್ನ –ಅಣ್ಣ
16. ಲ - ಳ ಅಲೆ –ಅಳೆ
17. ಬಾ – ಭಾ ಬಾನು –ಭಾನು
18. ದ – ಧ ದನ –ಧನ

**V ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **4*2=08**

19. ಕಾಡಿನ ರಾಜ ಸಿಂಹವು ವ್ಯಥೆಪಡಲು ಕಾರಣವೇನು ?
20. ಡಾ. ಜೀಬ್ರಾ ಕಾಯಿಲೆ ಬಿದ್ದ ಕಾಡಿನ ರಾಜ ಸಿಂಹವನ್ನು ಹೇಗೆ ಪರೀಕ್ಷಿಸಿತು ?
21. ಡಾ, ಹೈನಾ ಕಾಯಿಲೆ ಬಿದ್ದ ಕಾಡಿನ ರಾಜ ಸಿಂಹವನ್ನು ಹೇಗೆ ಪರೀಕ್ಷಿಸಿತು ? ಸಿಂಹವು ಏನು ಮಾಡಿತು ?
22. ಜಾN ವೈದ್ಯ ನರಿ ಕಾಯಿಲೆ ಬಿದ್ದ ಕಾಡಿನ ರಾಜ ಸಿಂಹವನ್ನು ಹೇಗೆ ಪರೀಕ್ಷಿಸಿತು ?

**VI. ಈ ಪದ್ಯವನ್ನು ಪೂರ್ಣಗೊಳಿಸಿ.** **1*4=04**

23. ಕಾಡಿನ ____________________

    __________________________

    ಅನ್ನವು ____________________

    _________________________

# ಪಾಠ-13 ಹೊಯ್ಸಳ

**I. ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ನಾಲ್ಕು ಆಯ್ಕೆಗಳನ್ನು ಗಮನಿಸಿ, ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ. 5*1=05**

1. ವಿಶ್ವಪ್ರಸಿದ್ಧ ಚನ್ನಕೇಶವ ದೇವಾಲಯ ಇರುವ ಸ್ಥಳ

   A) ಹಳೇಬೀಡು B) ಬೇಲೂರು C) ಬನವಾಸಿ D)ಸೋಮನಾಥಪುರ

2. ಅಂಗಡಿ ಗ್ರಾಮ ಇರುವ ತಾಲೂಕು

   A). ಕೊಪ್ಪ B) ಕಡೂರು C) ಶೃಂಗೇರಿ D) ಮೂಡಿಗೆರೆ

3. ಹೊಯ್ಸ ವಂಶದ ಪ್ರಸಿದ್ಧ ದೊರೆ

   A) ವಿಷ್ಣುವರ್ಧನ B) ಕೃಷ್ಣದೇವರಾಯ C) ಅಮೋಘವರ್ಷ D) ಮಯೂರವರ್ಮ

4. 'ಹೌಹಾರು' ಈ ಪದದ ಅರ್ಥ.

   A)ಅಬ್ಬರಿಸು B) ಬೆಚ್ಚಿಬೀಳು C) ಹಾರಿಹೋಗು D) ಕೂಗಿಕೊಳ್ಳು

5. ಆಹಾ! ಈ ಜಲಪಾತವು ಎಷ್ಟು ಅದ್ಭುತವಾಗಿದೆ. - ಈ ವಾಕ್ಯದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ

   A)ಅಲ್ಪವಿರಾಮ B) ಪ್ರಶ್ನಾರ್ಥಕ C) ಭಾವಸೂಚಕ ಉದ್ಧರಣ

**II. ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆಯಿರಿ. 3*1=03**

6. ದೊರೆ ರಾಜ ಅರಸ ದಂಡನಾಯಕ
7. ಬೇಲೂರು ಹಂಪೆ ಹಳೇಬೀಡು ಸೋಮನಾಥಪುರ
8. ಹನುಮಂತ ಹಣವಂತ ಗುಣವಂತ ಬುದ್ಧಿವಂತ

**III. ಈ ಕೆಳಗೆ ಕೊಟ್ಟಿರುವ ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಂದಿನ ವಾಕ್ಯಗಳನ್ನು ಬರೆಯಿರಿ. 2*2=04**

9. ಕಂಡಕ್ಟರ್ : ನೀವು ಯಾವ ಊರಿಗೆ ಹೋಗಬೇಕು ?

   ಪ್ರಯಾಣಿಕ : ನಾನು ____________________________

   ಕಂಡಕ್ಟರ್ : ಬೆಂಗಳೂರಿಗೆ ೨೫೦ ಬಸ್ ದರ ಆಗುತ್ತದೆ.

   ಪ್ರಯಾಣಿಕ : __________________________ ಟಿಕೆಟ್ ಕೊಡಿ

10 . ವೈದ್ಯ : ನಿಮಗೆ ಯಾವ ರೀತಿಯ ರೋಗ ಲಕ್ಷಣಗಳಿವೆ

   ರೋಗಿ : ನನಗೆ ನಿನ್ನೆಯಿಂದ _________________ ಇದೆ.

   ವೈದ್ಯ : ನಿನ್ನಲ್ಲಿಗೆ ಬರುವ ಮುನ್ನ ಯಾವುದಾದರೂ ಔಷದಿ ತೆಗೆದುಕೊಂಡಿದ್ದಿರಾ ?

   ರೋಗಿ : ___________________________________________

**IV. ಕೊಟ್ಟಿರುವ ವಾಕ್ಯಗಳಗೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿರಿ. 2*1=02**

11 . ಭಲೇ ಸಳ ಒಳ್ಳೆಯ ಕೆಲಸ ಮಾಡಿದೆ. ?

12. ಗುರುಗಳೇ ಅಲ್ಲಿ ಕಾಣುತ್ತಿರುವ ಊರು ಯಾವುದು

**V. ಕೊಟ್ಟಿರುವ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ. 3*1=03**

13. ತಮ್ಮ ಅಪೂರ್ವ /ನಯನ ಮನೋಹರವಾಗಿವೆ./ ಸೌಂದರ್ಯದಿಂದ /ಮದನಿಕ ವಿಗ್ರಹಗಳು

14. ಘಟನೆಯ / ಶಿಲ್ಪ / ಸಳನು / ಹೋರಾಡಿದ / ಹಿಲಿಯೊಡನೆ

15 ಈ ದೇವಾಲಯವು / ನಿರ್ಮಾಣವಾಗಿದೆ / ನಕ್ಷತ್ರಾಕಾರದ / ಜಗುಲಿಯ ಮೇಲೆ

**VII. ಈ ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 3*2=06**

16. ಸಳನು ಹುಲಿಯನ್ನು ಕೊಂದ ಘಟನೆಯನ್ನು ವಿವರಿಸಿರಿ

17. ಬೇಲೂರಿನಲ್ಲಿರುವ ಚೆನ್ನಕೇಶವ ದೇವಾಲಯವನ್ನು ಕುರಿತು ನಿಮ್ಮದೇ ಮಾತುಗಳಲ್ಲಿ ವರ್ಣಿಸಿರಿ

18. ಮದನಿಕಾ ವಿಗ್ರಹಗಳನ್ನು ಕುರಿತು ಬರೆಯಿರಿ.

## ಪಾಠ-14 ರಾಜನ ಸುಪ್ರಭಾತ (ಪದ್ಯ)

**I. ಪದಗಳ ಅರ್ಥಗಳನ್ನು ಹೊಂದಿಸಿ ಬರೆಯಿರಿ** **5*1=05**

A B

1.ಮೂಡು —— ನಯನ

2.ಪ್ರವಪ್ನ —— ಪುಸ್ತಕ

3.ಕಣ್ಣು ——— ಭಾನುವಾರ

4.ಹೊತ್ತಿಗೆ _ ಉದಯಿಸು

5.ರವಿವಾರ — ಕನಸು

**II. ಈ ಕೆಳಗಿನ ವಾಕ್ಯಗಳನ್ನು ಗಮನಿಸಿ ಲಿಂಗ ಸೂಚಕ ಪದಗಳನ್ನಿ ಗಮನಿಸಿ ಬಿಟ್ಟಿರುವ ಸ್ಥಳಗಳನ್ನು ತುಂಬಿರಿ.** **4*1=04**

6.ಬಾಲಕ ಕಥೆ ಓದಿದನು

_______ ಕಥೆ ಓದಿದನು

7. ಅಣ್ಣ ಸಂತೆಗೆ ಹೋದನು

__________ ಸಂತೆಗೆ ಹೋದನು

8. ಅಪ್ಪ ತಿಂಡಿ ತೀದನು

______ ತೀಂಡಿ ತಿಂದಳು

9.ಗೆಲೆಯ ಆಟ ಆಡಿದನು

_____ ಆಟ ಆಡಿದಳು

**III. ಈ ಶಬ್ಧಗಳಿಗೆ ಮಾದರಿಯಂತೆ ಪ್ರಾಸವನ್ನು ಬರೆಯಿರಿ** **2*1=02**

ಮಾದರಿ ತೊಳೆ - ಹೊಳೆ, ಇಳೆ

10.ಹಾಡು– ___ ______

11. ಮಜಾ — ______ _________

**IV. ಬಿಡಿಸಿ ಬರೆದಿರುವುದನ್ನು ಜೋಡಿಸಿ ಬರೆ** **2*1=02**

12. ಸಾಕು + ಇನ್ನು : ______

13. ನಿನ್ನೆಗೆ + ಆಯಿತು : _______

**V. ಕೆಳಗೆ ನೀಡಿರುವ ವಸ್ತುಗಳ ಬಗ್ಗೆ ಎರಡೆರಡು ವಾಕ್ಯಗಳಲ್ಲಿ ಬರೆ.** **2*2=04**

14. ಶಾಲೆ :________________________________________

_________________________________________________

15.ಪುಸ್ತಕ : _____________________________________

_______________________________________________

**V. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ.** **3*1=03**

16.ಶೂಗಳುನು ಕಟ್ಟಿರಕೊ ಚೆಲವನ್ನು ಎತ್ತಿಕೋ

______________________________

ನಿಜವೆಂದ್ರೆ ನನ್ನವ್ವ ಈವತ್ತು ರವಿವಾರ

______________________________

ಅಕಟಕಟ ! ವಾರಕ್ಕೆ ಒಂದೇ ರವಿವಾರ

_______________________________

## ಪಾಠ-15 ಆಡೋಣ ಬಾ

**1. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ನಾಲ್ಕು ಆಯ್ಕುಗLನ್ನು ಗಮನಿಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.** **5*1=05**

1. ಇದೊಂದು ಹೊರಾಂಗಣ ಆಟವಾಗಿದೆ______________

   A) ಚೌಕಾಬಾರ B) ಕೇರಂ C) ಚಿಣ್ಣಿದಾಂಡು D) ಚೆಸ್

2. ಇದೊಂದು ಒಳಾಂಗಣ ಆಟವಾಗಿದೆ.______________

   A) ಮರಕೋತಿ B) ಓಟದ ಆಟ C) ಕಲ್ಲೋ-ಮಣ್ಣೋ D) ಆಣೆಕಲ್ಲು

3. ಕಾಡು- ಈ ಪದದ ನಾನಾರ್ಥಕ ಪದಗಳು______

   A) ಅರಣ್ಯ, ವನ B) ಅರಣ್ಯ, ಪೀಡಿಸು C) ವನ, ಭೂಮಿ D) ಅರಣ್ಯ, ನದಿ

4. ರಸ್ತೆ ದಾಟುವಾಗ ಎಡ-ಬಲ ನೋಡಬೇಕು - ಈ ವಾಕ್ಯದಲ್ಲಿರುವ ಸೂಚನೆ

   A) ರಸ್ತೆ B) ಎಡ-ಬಲ C) ದಾಟುವಾಗ D) ನೋಡಬೇಕು

5'ಆತುರ' ಪದದ ಅರ್ಥ

   A) ಅವಸರ B) ಅಪಾಯ C) ಆಕಸ್ಮಿಕ D) ಅಪಘಾತ

**II.6. ಕೊಟ್ಟಿರುವ ಆಟಗಳನ್ನು ಒಳಾಂಗಣ ಹಾಗೂ ಹೊರಾಂಗಣ ಆಟಗಳಾಗಿ ಬರೆಯಿರಿ** **1*2=02**

ಕ್ರಿಕೇಟ್, ಕೇರಂ, ಹಾವು-ಏಣಿ ಆಟ, ಖೋ-ಖೋ, ಕಬ್ಬಡ್ಡಿ,

ಚೌಕಾಬಾರ, ವಾಲಿಬಾಲ್, ಚೆಸ್ (ಚದುರಂಗ)

**III. ಕೆಳಗಿನ ಪದಗಳಿಗೆ ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ.** **1*3=03**

7. ಸೂಚನೆ : ________________________________

8. ವ್ಯಾಯಾಮ : ________________________________

9. ವಿಶ್ರಾಂತಿ ; ________________________________

**IV. ಕೊಟ್ಟರುವ ಪದಗಳಿಗೆ ನಾನಾರ್ಥಕ ಪದಗಳನ್ನು ಬರೆಯಿರಿ.** **2*1=02**

10. ಕರಿ :- ______ _______

11. ಕವಿ :- ______ _______

**V. ಮಾದರಿಯಂತೆ ಬರೆಯಿರಿ.** **3*=03**

**ಮಾದರಿ : ಅವಳು ಹಾಡು ಹೇಳಿದಳು**

12.ಅವಳು ಹಾಡು ಹೇಳಲಿಲ್ಲ

13 ಮಕ್ಕಳು ಕುಣಿದು ಕುಪ್ಪಳಿಸಿದಳು

14. ಹುಲಿಯು ಜೋರಾಗಿ ಘರ್ಜನೆ ಮಾಡಿತು

15. ಅಪ್ಪ ಸಂತೆಗೆ ಹೋದರು

**V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು -ಮೂರು ವಾಕ್ಯಗಳಲ್ಲಿ ಉತ್ತರಿಸಿರಿ** **2*2=04**

16. ನಿಮ್ಮ ಊರಿನಲ್ಲಿ ಆಡುವ ಆಟಗಳ ಹೆಸರನ್ನು ಬರೆಯಿರಿ.

17. ನೀನು ಇಷ್ಟಪಟ್ಟು ಆಡುವ ಯಾವುದಾದರೂ ಒಂದು ಆಟದ ಕುರಿತಾಗಿ ಬರೆಯಿರಿ.

**VI. 18. ಚೌಕಾಬಾರ ಆಡುವ ವಿಧಾನವನ್ನು ಬರೆಯಿರಿ** **1*5=05**

A) ಎರಡೂ ಬಗೆಯ ಆಟಗಳಿಗೆ ನಾಲ್ಕು ಕಾಯಿಗಳು ಇರುತ್ತವೆ.

B) ಚೌಕಾಬಾರ ಆಡಲು ತೇಯ್ದ ಹುಣಸೇ ಬೀಜ, ಕವಡೆ ಹಾಗೂ ಪಗಡೆಯ ದಾಳಗಳನ್ನು ಬಳಸುತ್ತಾರೆ.

C) ಚೌಕಾಬಾರ ಆಟದಲ್ಲಿ ಪ್ರತಿ ಆಟಗಾರ ಕೂರುವ ನಿರ್ದಿಷ್ಟ ಸ್ಥಳವನ್ನು ಘಟ್ಟ ಎನ್ನುತ್ತಾರೆ.

D) ಚೌಕಾಬಾರ ಐದು ಮನೆ ಮತ್ತು ಏಳು ಮನೆ - ಎಂದು ಎರಡು ವಿಧಗಳಿವೆ.

E) ಈ ಆಟದಲ್ಲಿ ಪ್ರತಿ ಆಟವನ್ನು ಇಬ್ಬರು/ ನಾಲ್ಕು ಮಂದಿ ಆಡಬಹುದು.

## ಪಾಠ-16. ಮುಳುಗದ ಸೂರ್ಯ (ಪದ್ಯ)

**I. ಈ ಕೆಲಗೆ ನೀಡಿರುವ ಪದಗಳನ್ನು ಅವುಗಳ ಅರ್ಥದೊಂದಿಗೆ ಹೊಂದಿಸಿ ಬರೆಯಿರಿ.** **5*1=05**

**A** **B**

1. ಧರೆ _________ ಪರಿಮಳ
2. ಅಂಧ _______ ಹಾಡುಗಾರ
3. ಪ್ರಭಾಕರ ——— ಭೂಮಿ
4. ಸೌರಭ ______ ಕುರುಡ
5. ಗವಾಯಿ —— ಸೂರ್ಯ

**II.ಈ ಕೆಳಗಿನ ಪದಗಳಿಗೆ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ .** **2*1=02**

6. ಬೆಟ್ಟ : _____ _______
7. ಅರಸ : _______ ________

**III. ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.** **3*1=03**

8. ಪುಟ್ಟರಾಜರು ಎಲ್ಲಿ ಜನಿಸಿದರು ?
9. ಪುಟ್ಟರಾಜ ಗವಾಯಿಗಳ ತಂದೆ-ತಾಯಿಯರ ಹೆಸರೇನು ?
10. ಪುಟ್ಟರಾಜ ಗವಾಯಿಗಳು ಯಾರ ಬಳಿ ಸಂಗೀತವನ್ನು ಪಡೆದರು ?

**IV. ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.** **4*1=04**

11. A) ನಯನ, B) ಕಣ್ಣು, C) ವದನ, D)ನೇತ್ರ
12. A) ಪರಿಮಳ, B) ಹರಡು, C) ಕೆಂಪು, D) ಸೌರಭ
13. A) ದರ್ಪ, B) ಶೌರ್ಯ, C) ಸಾಹಸ, D) ಪರಾಕ್ರಮ
14. A) ಒಡನೆ, B) ಕೂಡಲೆ, C) ತಕ್ಷಣ, D) ನಿದಾನ

**V.ಈ ಪಠ್ಯವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.** **4*1=04**

ಮಕ್ಕಳ ಸಾಹಿತಿ ಪ.ಗು. ಸಿದ್ದಾಪುರ ಇವರು ವಿಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಜನಿಸಿದರು. ಇವರ ತಂದೆ ಗುರುಪಾದಪ್ಪ ತಾಯಿ ಯಮುನಾ ಬಾಯಿ. ಇವರು ಮಕ್ಕಳ ಸಾಹಿತ್ಯವನ್ನು ಹೆಚ್ಚಾಗಿ ರಚನೆ ಮಾಡಿದ್ದಾರೆ. ಮಕ್ಕಳಿಗಾಗಿ 'ಯಾವುರಾನೆ ವಿಜಯಪುರದಾನೆ'' ಕರಡಿ ಹೇಳಿದ ಕಥೆ' 'ಬಂಗಾರದ ಬಳೆ' - ಇನ್ನೂ ಅನೇಕ ಕಥೆಗಳನ್ನು ಪ್ರಕಟಿಸಿದ್ದಾರೆ.

ಪ್ರಶ್ನೆಗಳು :-

15. ಪ.ಗು. ಸಿದ್ದಾಪುರ ಇವರು ಎಲ್ಲಿ ಜನಿಸಿದರು ?
16. ಪ.ಗು. ಸಿದ್ಧಾಪುರ ಇವರ ತಂದೆ-ತಾಯಿಯರ ಹೆಸರೇನು ?
17. ಪ.ಗು. ಸಿದ್ಧಾಪುರ ಯಾವ ಸಾಹಿತ್ಯ ರಚನೆಯಲ್ಲಿ ಹೆಸರುವಾಸಿಯಾಗಿದ್ದಾರೆ ?
18.ಪ.ಗು. ಸಿದ್ಧಾಪುರ ರವರು ಪ್ರಕಟಿಸಿರುವ ಮಕ್ಕL ಕಥೆ ಪುಸ್ತಕಗಳನ್ನು ಹೆಸರಿಸಿ

**VI . 19. ಪದ್ಯದ ಮುಂದಿನ ಸಾಲುಗಳನ್ನು ಬರೆಯಿರಿ.** **1*2=02**

ಕಟ್ಟೆ ಬೆಳೆಸಿ ತಾ ಹುಟ್ಟುಹಾಕಿದೆ.

____________________

ಸಾವಿರ ಸಾವಿರ ಅಂಧ ಮಕ್ಕಳಿಗೆ

__________________________

# ಕೀಲಿ ಉತ್ತರಗಳು

## ಪಾಠ -1. ತುತ್ತೂರಿ

**I.**

1. ಕಸ್ತೂರಿಯು ಬಣ್ಣದ ತಗಡಿನ ತುತ್ತೂರಿಯನ್ನು ಕೊಂಡನು
2. ಕಸ್ತೂರಿಯೂ ಜಂಭದ ಕೋಳಿಯ ರೀತಿಯಲ್ಲಿ ನಡೆದನು
3. ಪುತ್ತೂರಿಗೂ ನೀರಿಗೆ ಜಾರಿತು
4. ಈ ಪದ್ಯವನ್ನು ಬರೆದವರು ಜಿಪಿ ರಾಜರತ್ನಂ

II.

5. ದಿಕ್ಕು
6. ಬೆಟ್ಟ
7. ಶಿಕ್ಷಕ
8. ಸಿಂಹ
9. ಮೈಸೂರು

III.

10. ಅಹಂಕಾರ
11. ಕೆಟ್ಟು ಹೋಗು
12. ಸಪ್ಪಳ
13. ಊದುವ ವಾದ್ಯ

IV.

14. ಪಾಲಾಯ್ತು
15. ಬೋಳಾಯ್ತು
16. ಹಾಳಾಯ್ತು
17. ಗೋಳಾಯ್ತು

V.

18. ಕಸ್ತೂರಿ
19. ಇಲ್ಲಿಂದ
20. ರೀತಿಯಲ್ಲಿ
21. ಗೋಳಾಯಿತು

VI.

22.

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮಪದನಿಸ ಊದಿದನು
ಸನಿದಪಮಗರಿಸ ಊದಿದನು

# ಪಾಠ 2 : ನನ್ನ ಕನಸು

I.

1. ಕಾಡಿಗೆ ಮರ ಕಡಿಯಲು ಮಾನವ ಬಂದನು
2. ಮಾನವನು ಮೊಲಕ್ಕೆ ಅಂಜುಮೂರಕ ಪ್ರಾಣಿ ಎಂದು ಕರೆದನು
3. ಕೋತಿಯೂ ಮಾನವನನ್ನು ನೀನು ಸುಂದರವೋ ಅಥವಾ ನಾವು ಸುಂದರವೋ ಎಂದು ಪ್ರಶ್ನಿಸಿತು
4. ಮಲವು ಮಾನವನನ್ನು ಅವಿವೇಕೆ ಎಂದು ಹೇಳಿತು
5. ಗೊಂಬೆಯನ್ನು ಹಿಡಿದು ಜೋತಾಡುತ್ತಿದ್ದ ಪ್ರಾಣಿ ಕೋತಿ

II.

6. ಈ ಮಾತನ್ನು ನರಿಯು ಮಾನವನಿಗೆ ಹೇಳಿತು
7. ಈ ಮಾತನ್ನು ಮಲವು ಮಾನವನಿಗೆ ಹೇಳಿತು
8. ಈ ಮಾತನ್ನು ಮಾನವನು ಪ್ರಾಣಿಗಳಿಗೆ ಹೇಳಿದನು
9. ಈ ಮಾತನ್ನು ರಾಜುವಿನ ತಾಯಿಯು ರಾಜವಿಗೆ ಹೇಳಿದರು
10. ಈ ಮಾತನ್ನು ರಾಜವಿನ ತಾಯಿಯು ರಾಜವಿಗೆ ಹೇಳಿದರು

III.

11. ಚಿತ್ರ
12. ಪಕ್ಷಿಗಳ ಕೂಗು
13. ಹಂಗಿಸು

IV.

14. ಮಾನವನು ತನ್ನ ಅತಿಯಾಸೆಯಿಂದ ಮರಗಿಡಗಳನ್ನು ಕಡಿಯುತ್ತಿದ್ದು ಆದ್ದರಿಂದ ಅತಿವೃಷ್ಟಿ ಹಾಗೂ ಅನಾವೃಷ್ಟಿ ಸಾವು ನೋವುಗಳು ಸಂಭವಿಸಿದೆ ಆದರೂ ಕೂಡ ಮಾನವನು ಕಾಡಿನ ವಿನಾಶಕ್ಕೆ ಮುಂದಾಗಿದ್ದಾನೆ ಆದ್ದರಿಂದ ಮಲವು ಮಾನವನಿಗೆ ಅವಿವೇಕೆ ಎಂದು ಹೇಳಿತು
15. ಕಾಡಿನಲ್ಲಿ ಪ್ರಾಣಿಗಳೆಲ್ಲ ಸೇರಿ ಮರ ಕಡಿಯಲು ಹೋದ ಮನುಷ್ಯನ ಮನಃಪರಿವರ್ತನೆ ಮಾಡಿದ ಕನಸು ರಾಜುಗೆ ಬಿತ್ತು
16. ಕಾಡಿನ ಸಂರಕ್ಷಣೆಗೆ ಮುಂದಾಗು ನೀನು ಬದುಕು ಜೊತೆಗೆ ಪ್ರಕೃತಿಯ ಉಳಿವಿಗೆ ನಿನ್ನ ಬುದ್ಧಿವಂತಿಕೆಯನ್ನು ಸೇರಿಸು, ಹೇಳು ಎಚ್ಚರಗೊಳ್ಳುವ ಸಮಯ ಮೂರು ಎದ್ದೇಳು ಎಂದು ಸಾಲುಮರದ ತಿಮ್ಮಕ್ಕನನ್ನು ನೋಡಿ ಕಲಿ ಎಂದು ಹೇಳಿತು
17. ಪ್ರಾಣಿ ಪಕ್ಷಿ ಕೀಟಗಳ ಮೈಬಣ್ಣಕ್ಕೆ ಮನಸ್ಸುತು ನಮ್ಮಂತೆ ಸುಂದರವಾಗಿ ಕಾಣಲು ಬಟ್ಟೆಗಳನ್ನು ಮಾನವ ಸಿದ್ಧಪಡಿಸಿರುವನು ಸಹಜ ಸೌಂದರ್ಯ ನಮ್ಮದು ತಿಳಿಯಿತೆ ಎಂದು ಜಿಂಕೆಯು ಮಾನವನಿಗೆ ಬುದ್ಧಿವಾದ ಹೇಳಿತು

V.

18. ಸಂಜೆ
19. ಅನಾವೃಷ್ಟಿ
20. ದುಃಖ
21. ಧೈರ್ಯಶಾಲಿ
22. ಕೊನೆ

VI. 22. ಕಾಡಿನ ನಾಶಕ್ಕೆ ಮುಂದಾಗಿರುದನ್ನು ನೋಡಿ ಅವಿವೇಕಿ ಎಂದಿತು.

23ಕಾಡಿನಲ್ಲಿ ಪ್ರಾಣಿಗಳೆಲ್ಲ ಸೇರಿ ಮರಕಡಿಯಲು ಬಂದ ಮನುಷ್ಯನ ಮನಃಪರಿವರ್ತನೆ ಮಾಡಿದ ಕನಸು

24. ಸಾಲುಮರದ ತಿಮ್ಮಕ್ಕನನ್ನು ನೋಡಿಕಲಿ ನೀನು ಬದುಕುವ ಪ್ರಕೃತಿಯ ಉಳಿವಿಗೆ ನಿಇನ್ನ ಬುದ್ಧಿವಂತಿಕೆಯನ್ನು ತೋರಿಸು. ಎಂದು ಹೇಳಿತು

25. ಮೊದಲಿಗೆ ನಮ್ಮ ಚರ್ಮವನ್ನೇ ಧರಿಸುತ್ತಿದ್ದುದನ್ನು ನೆನಪಿಸಿಕೋ, ನಿಮ್ಮ ಬಟ್ಟೆಯಲ್ಲೇನು ವಿಶೇಷ? ಪ್ರಾಣಿ, ಪಕ್ಷಿ,ಕೀಟಗಳ ಮೈಬಣ್ಣಕ್ಕೆ ಮನಸೋತು ನಮ್ಮಂತೆ ಸುಂದರವಾಗಿ ಕಾಣಲು ಬಟ್ಟೆಯನ್ನು ಧರಿಸಿರುವೆ. ಸಹಜ ಸVದರ್ಯ ನಮ್ಮದು ತಿಳಿಯಿತೇ ? ಎಂದು ಹೇಳಿತು

**VII. 26. ಪಾಣಿ ಪಕ್ಷಿಗಳಿಂದ ಕೂಡಿದ ಒಂದು ಸುಂದರವಾದ  ಪರಿಸರದ  ಚಿತ್ರ ಬರೆದು ಬಣ್ಣ ತುಂಬುವರು..**

# ಪಾಠ 3 : ಸ್ವಾತಂತ್ರ್ಯ ದಿನಾಚರಣೆ

**I.**

1. ಆಗಸ್ಟ್ 15
2. ಅಕ್ಟೋಬರ್ 2
3. ನವಂಬರ್ 1
4. ನವಂಬರ್ 14

II.

5. ಮೂರು
6. ಶೌರ್ಯ
7. ಶಾಂತಿ
8. ಸಮೃದ್ಧಿ
9. ಮಹಾತ್ಮ ಗಾಂಧಿ

III.

10. ನಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಶಿಸ್ತಿನಿಂದ ವರ್ತಿಸುತ್ತಾರೆ
11. ನಮ್ಮ ಶಾಲೆಯಲ್ಲಿ ಪ್ರತಿ ವರ್ಷವೂ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ
12. ನಮ್ಮ ಶಾಲೆಯನ್ನು ರಾಷ್ಟ್ರೀಯ ಹಬ್ಬಗಳ ದಿನದಂದು ತಳಿರು ತೋರಣಗಳಿಂದ ಸಿಂಗರಿಸಲಾಗುತ್ತದೆ
13. ನಾನು ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿದ್ದಕ್ಕೆ ನನಗೆ ಬಹುಮಾನ ದೊರಕಿತು
14. ನಮ್ಮ ಶಾಲೆಯ ಕೈತೋಟವೂ ತುಂಬಾ ಸುಂದರವಾಗಿದೆ

IV.

15. ನಮ್ಮ ದೇಶ ಭಾರತ
16. ನಮ್ಮ ದೇಶವು ಆಗಸ್ಟ 15 1947 ರಂದು ಸ್ವಾತಂತ್ರ ಪಡೆಯಿತು
17. ನಮ್ಮ ರಾಷ್ಟ್ರಗೀತೆ ಜನ ಗಣ ಮನ
18. ಮುಖ್ಯ ಗುರುಗಳು ಶಾಲಾ ವಿದ್ಯಾರ್ಥಿ ಮಂಡಲದ ಸಭೆ ಕರೆದರು
19. ಮೂರನೇ ತರಗತಿಯವರು ಧ್ವಜ ಸ್ತಂಭವನ್ನು ಸಿಂಗರಿಸುವ ಕೆಲಸವನ್ನು ಮಾಡಲು ಒಪ್ಪಿದರು

V.

20. ನಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಗಣರಾಜ್ಯೋತ್ಸವ ಗಾಂಧಿ ಜಯಂತಿ ಅಂಬೇಡ್ಕರ್ ಜಯಂತಿ ಮಕ್ಕಳ ದಿನಾಚರಣೆ ಕನಕದಾಸ ಜಯಂತಿ ವಾಲ್ಮೀಕಿ ಜಯಂತಿ ಮುಂತಾದ ದಿನಾಚರಣೆಗಳನ್ನು ಆಚರಿಸುತ್ತೇವೆ
21. ನಮ್ಮ ರಾಷ್ಟ್ರವು ಆಗಸ್ಟ 15 1947 ರಂದು ಬ್ರಿಟಿಷರ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರವನ್ನು ಪಡೆಯಿತು. ಅದರ ನೆನಪಿಗಾಗಿ ಪ್ರತಿ ವರ್ಷ ಆಗಸ್ಟ 15 ರಂದು ನಾವು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತೇವೆ
22. ಸ್ವಾತಂತ್ರ್ಯ ದಿನಾಚರಣೆಗಾಗಿ ಅತಿಥಿಗಳ ಪಟ್ಟಿ ಸಾಂಸ್ಕೃತಿಕ ಕಾರ್ಯಕ್ರಮಗಳ ಪಟ್ಟಿ ವೇದಿಕೆ ಸಿದ್ದತೆ ಧ್ವಜಸ್ತಂಭದ ಸಿದ್ದತೆ ಮುಂತಾದವುಗಳನ್ನು ಸಿದ್ದತೆ ಮಾಡಿಕೊಂಡಿರಬೇಕು
23. ಸ್ವಾತಂತ್ರ್ಯ ದಿನದಂದು ಸಾಂಸ್ಕೃತಿಕ ಕಾರ್ಯಕ್ರಮ ಆಟೋಟ ಸ್ಪರ್ಧೆ ಕಾರ್ಯಕ್ರಮಗಳು ಜರುಗಿದವು

VI. ಚಿತ್ರವನ್ನು ಬಿಡಿಸಿ ಬಣ್ಣ ಹಚ್ಚುವರು

# ಪಾಠ 4 : ಕಂದ

**I.**

1. ಮಗು
2. ಚಂದ್ರು
3. ಚಿಗುರು
4. ಹೂವಿನ ದಳ
5. ಪಾದ

II.

6. ಕೂಸು ಇದ್ದ ಮನೆಗೆ ಬೇಸಣಿಕೆ ಬೇಡ ಎಂದು ತಾಯಿ ಹೇಳಿದ್ದಾಳೆ
7. ಅಳುವ ಕಂದನ ತುಟಿಯನ್ನು ಹವಳಕ್ಕೆ ಹೋಲಿಸಲಾಗಿದೆ
8. ಅಳುವ ಕಂದನ ಕಣ್ಣಿನ ನೋಟವು ಶಿವನ ಕೈಯಲಾಗು ಹೊಡೆದಂಗೆ ಇರುತ್ತದೆ ಎಂದು ಹೋಲಿಸಲಾಗಿದೆ
9. ಮಗು ಸಂಜೆಯ ಚಂದ್ರನನ್ನು ತಂದು ನಿಲ್ಲಿಸೆಂದು ಕೇಳುತ್ತದೆ

III.

10. ಅಂಗಾಲ ತೊಳೆದೆ ನಾ
11. ಹವಳದ ಕುಡಿಯಂಗ
12. ಬೇಸಣಿಕೆ ಯಾತಕ
13. ಇಂದೇನು ಹೇಳಲಿ

IV.

14. ಕೂಸು ಇದ್ದ ಮನೆಗೆ ಬೀಸಣಿಕೆ ಬೇಡ ಏಕೆಂದರೆ ಕೋಸು ಕಂದಾಯ ಒಳಗೆ ಹೊರಗೆ ಹಾಡುತ್ತಿದ್ದರೇ ಭೀಸಣಕೆಯಲ್ಲಿ ಗಾಳಿ ಬರುವಂತೆ ತಂಪಾದ ಗಾಳಿ ಬೀಸುತ್ತಿರುತ್ತದೆ

15. ಆಡಿ ಬಂದ ಕಂದನಿಗೆ ತಾಯಿಯು ಅಂಗಾಲವನ್ನು ತೊಳೆದು ತಂಗಿನ ಕಾಯಿ ತಿಳಿ ನೀರ ತಕ್ಕೊಂಡು ಬಂಗಾರದಂತ ಮುಖವನ್ನು ತೊಳೆದು ಉಪಚರಿಸಿದಳು ಅಳುವ ಕಂದನ ತುಟಿಯು ಹವಳದಂತೆ ಹುಬ್ಬು ಬೇವಿನ ಹೆಸಳಂತೆ, ಕಣ್ಣೋಟವು ಶಿವನ ಕೈಯಲಾಗು ಹೊಳೆದಂತೆ

V.

16. ತಕ್ಕಂಡು
17. ಕಣ್ಣೋಟ
18. ಕುಡಿಯುಬ್ಬು
19. ಕಂದಯ್ಯ
20. ಕೈಯಲ್ಲಗು

VI

21. ಮಗು ಶಿಶು
22. ಮಾತೃ ಅಮ್ಮ
23. ಸುವರ್ಣ

# 5.ಚಿಗುರು

**I.**

1. ಪತ್ರಿಕೆ
2. ಲೇಖನ
3.  ಮುದ್ರಿತ
3. ಗಾತ್ರ
4. ಸಂತಸಗೊಂಡರು

**II.**

6. ನಿಮಗಿದು ತಿಳಿದಿರಲಿ
7. ನಾಡಹಬ್ಬ
3.  ಗಾದೆ
8. ಸ್ವಾಮಿ ವಿವೇಕಾನಂದ

**III.**

9. ಸರಿ
10. ತಪ್ಪು
11. ತಪ್ಪು
12. ಸರಿ
13. ಸರಿ

**IV.**

14. ನಮ್ಮ ನಾಡಹಬ್ಬ ದಸರಾ
15. ಮಾತು ಬಲ್ಲವನಿಗೆ ಜಗಳವಿಲ್ಲ
16. ನಮ್ಮ ರಾಜ್ಯ ಕರ್ನಾಟಕ
17. ಹಣ್ಣುಗಳ ರಾಜ ಮಾವು

**V.**

18. ಕೋಗಿಲೆ ಗಾನ ಇಂಪು
19. ಮಾಡಿದ್ದುಣ್ಣೋ ಮಾರಾಯ

**VI.**

20. ಚಿಗುರು
21. ದಸರಾ
22. ನರೇಂದ್ರ
23. ಗಾದೆ
24. ಜಲಪಾತ

**VII.**

25. ತೋಳದ ಸೀಬೆ ಹಣ್ಣಿನ ಎಲೆ ಮತ್ತು ಉಪ್ಪನ್ನು ನೀರಿಗೆ ಹಾಕಿ ಕುದಿಸಬೇಕು ಕುದಿಸಿದ ನೀರನ್ನು ಹಿತವಾದ ಶಾಖದಲ್ಲಿ ಮುಕ್ಕಳಿಸಿದರೆ ಹಲ್ಲು ನೋವು ಶಮನವಾಗುತ್ತದೆ

26. ನನ್ನ ಸಹಪಾಠಿ ರಾಧಾ ಅವಳು ಬರೆದಿರುವ ಲೇಖನಗಳು ತುಂಬಾ ಸ್ಪಷ್ಟವಾಗಿತ್ತು ನನಗೆ ಓದಲು ಕಷ್ಟವಾಗಲಿಲ್ಲ ಆದ್ದರಿಂದ ನಮ್ಮ ನಾಡಹಬ್ಬವನ್ನು ಸುಂದರವಾಗಿ ವರ್ಣಿಸಿ ಬರೆದಿದ್ದಾಳೆ

# 6. ಈಸೂರು ಸ್ವಗತ

**I.**

1. ಖಾತೆ ಕಿರ್ದಿ
2. ಗುಪ್ತ
3. ದಂಡ
4. ಈಸೂರು
5. ನಿರಾಯುಧ

**II.**

6. ಮುಕ್ತಾಯ
7. ನಿರ್ಗಮನ
8. ಗೆಲುವು
9. ಹೇಡಿ

**III.**

10. ತಪ್ಪು
11. ಸರಿ
12. ತಪ್ಪು
13. ಸರಿ
14. ತಪ್ಪು

**IV.**

15. ಬ್ರಿಟಿಷರು ಹಿಂದೆ ಭಾರತವನ್ನು ಆಳುತ್ತಿದ್ದರು.
16. ಮೈಸೂರಿನವರು ಸ್ವಾತಂತ್ರ್ಯ ಪ್ರೇಮಿಗಳು.
17. ದೇವಸ್ಥಾನದ ಮುಂದೆ ಸಭೆ ನಡೆಸಿದರು.

**V.**

18. ಈಸೂರು ಶಿವಮೊಗ್ಗ ಜಿಲ್ಲೆಯಲ್ಲಿದೆ
19. ಬ್ರಿಟಿಷರ
20. ಬೇಜವಬ್ದಾ ರಿ ಅಧಿಕಾರಿಗಳಿಗೆ ಈಸೋರಿಗೆ ಪ್ರವೇಶವಿಲ್ಲ ಎಂದರು
21. ಸ್ವಗತ ಎಂದರೆ ನನಗೆ ತಾನೇ ಹೇಳಿಕೊಳ್ಳುವುದು
22. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಚಳುವಳಿ

**VI.**

23. ತಮ್ಮದೇ ಸರ್ಕಾರ ರಚಿಸಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಪ್ರೇಮಿಗಳ ಊರು ಈಸೂರು ಹಾಗೂ ಈಸೂರು ಶಿವಮೊಗ್ಗ ಜಿಲ್ಲೆಗೆ ಸೇರಿದೆ.

24. ದೇಶದ ಪ್ರಜೆಗಳ ಮಕ್ಕಳನ್ನು ಒಳಗೊಂಡ ತಮ್ಮದೇ ಸರ್ಕಾರವನ್ನು ರಚಿಸಿ ದೂರ ರಕ್ಷಣೆಗೆ ನಿಲ್ಲಲು ಹೊಸ ಸರ್ಕಾರದಲ್ಲಿ ಮಕ್ಕಳನ್ನು ಅಧಿಕಾರಿಗಳನ್ನಾಗಿ ಮಾಡಿದರು.

25.ಖಾತೆ ಕಿರ್ದಿ ಪುಸ್ತಕಗಳೊಂದಿಗೆ ಕಂದಾಯ ವಸೂಲಿಗೆ ಬಂದ ಅಧಿಕಾರಿಗಳನ್ನು ಹೋರಾಟಗಾರ ಯುವಕರು ವಿರೋಧಿಸಿದರು ರಾಜ ನಾನು ಕೊಡಿ ಗಾಂಧಿ ಟೋಪಿ ಧರಿಸಿ ಎಂದು ವಿನಂತಿಸಿದರು ಮಾತಿನ ಚಕಮಕ್ಕೆ ನಡೆಯಿತು ವಿನಂತಿಗೆ ಒಪ್ಪದ ಅಧಿಕಾರಿಗಳಿಂದ ಹೋರಾಟಗಾರರು ಖಾತೆ ಕಿರದಿ ಪುಸ್ತಕಗಳನ್ನು ಕಸಿದುಕೊಂಡರು.

# 7. ಪ್ರಾಮಾಣಿಕ ಬಾಲಕ

**I.**

1. ಮಾವಿನ
2. ಮಕ್ಕಳು
3. ಸ್ವಾತಂತ್ರ್ಯ
4.ಜವಾಹರ್ಲಾಲ್ ನೆಹರು
5. ದೇಶಪ್ರೇಮ

**II.**

6. ಜೈ ಜವಾನ್ ಜೈ ಕಿಸಾನ್
7. ಲಾಲ್ ಬಹುದ್ದೂರ್ ಶಾಸ್ತ್ರಿ
8. ಸತ್ಯಾಗ್ರಹ

**III.**

9 .ನೆಹರು ರವರು ಪ್ರಾಮಾಣಿಕತೆ ಆಗು ದೇಶಪ್ರೇಮದ ನಡವಳಿಗಳಿಂದ ದೇಶದಲ್ಲೆ ಮನೆಮಾತಾದರು
10 .ಶಾಸ್ತ್ರೀಯ ಅವರಲ್ಲಿ ದೇಶಪ್ರೇಮ ಪಟ್ಟಿದೆ ಹೇಳಿತು
11 ಮಾವಿನ ಹಣ್ಣು ಮಕ್ಕಳನ್ನು ಆಕರ್ಷಿಸಿದವು
12. ತಮ್ಮದಲ್ಲದ ತಪ್ಪಿಗೆ ಶಾಸ್ತ್ರಿಯವರು ಹೊಣೆ ಹೊತ್ತರು

**IV.**

13. ಮಕ್ಕಳು ಮಾವಿನ ಹಣ್ಣನ್ನು ನೋಡಿ ತೋಪು ಪ್ರವೇಶಿಸಿದರು
14. ಮಾವಿನ ಹಣ್ಣನ್ನು
15.1947 ಆಗಸ್ಟ 15 ರಂದು
16. ಮಕ್ಕಳು ತೋಟದ ಮಾಲೀಕನನ್ನು ಕಂಡು ಗಲಿಬಿಲಿಕೊಂಡರು
17. ಬಾಲಕನ ಮುಗ್ಧ ಹಾಗೂ ಪ್ರಾಮಾಣಿಕ ಮಾತುಗಳನ್ನು ಕೇಳಿ ಮಾಲಿಕನ ಮನಸ್ಸು ಕರಗಿತು

**V.**

18. ನಾನು ಮಾಡಿದ್ದು ತಪ್ಪು ಇನ್ನೆಂದು ಅಂತಹ ತಪ್ಪನ್ನು ಮಾಡುವುದಿಲ್ಲ ಆದರೆ ನಾನು ಮಾಡಿದ ತಪ್ಪಿಗೆ ನನ್ನ ತಂದೆ ತಾಯಿ ಮತ್ತು ಗುರುಗಳು ನಿಂದನೆಗೆ ಗುರಿಯಾದರಲ್ಲ ಎಂದು ದುಃಖಿಸುತ್ತಿರುವೆ ಎಂದು ಬಾಲಕ ಮಾಲೀಕನಿಗೆ ಹೇಳಿದನು.

19. ಶಾಸ್ತ್ರೀಯವರು ರೈಲ್ವೆ ಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ರೈಲ್ವೆ ಅಪಘಾತವೊಂದಕ್ಕೆ ತಾವೇ ಹೊಣೆ ಹೊತ್ತು ತಪ್ಪು ತಮ್ಮದಲ್ಲದಿದ್ದರೂ ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು.

**VI.**

20. ಈ ಮಾತನ್ನು ಬಾಲಕ ತೋಟದ ಮಾಲೀಕನಿಗೆ ಹೇಳಿದನು
21. ಈ ಮಾತನ್ನು ತೋಟದ ಮಾಲೀಕ ಬಾಲಕನಿಗೆ ಹೇಳಿದರು.

# 8. ಸಂಕ್ರಾಂತಿ

**I.**

1 ಸಂಕ್ರಾಂತಿ

2 ಲಂಗ

3 ಬಾಳೆಹಣ್ಣು ಬೆಲ್ಲ

4 ಪುಟಾಣಿ

5 ಎಳ್ಳು- ಎಲಚಿ –ಅಚ್ಚು

**II.**

6 ಲಂಗ ಹಾಕಿಕೊಂಡು

7 ದನಿ ಮಾಡಿಕೊಂಡು

8 ಬಾಳೆಹಣ್ಣು ಬೆಲ್ಲ

9. ಅಕ್ಕಿ- ಬೆಲ್ಲ- ಹಣ್ಣು

**III.**

10. ಗರಿಮುರಿ ಜರತಾರಿ ಲಂಗ ಹಾಕಿಕೊಂಡಿದ್ದಳು

11 ಎಳ್ಳು ಕಬ್ಬು ಸಕ್ರೆ ಅಚ್ಚು ಬಾಳೆಹಣ್ಣು ಬೆಲ್ಲ ಬಿರೋಕಂತ ಹೊರಟಿದ್ದಾಳೆ

12 ಅಕ್ಕಿ- ಬೆಲ್ಲ -ಹಣ್ಣು

13 ಎಳ್ಳು- ಎಲಚಿ- ಅಚ್ಚು

14. ಎಚ್,ಎಸ್, ವೆಂಕಟೇಶಮೂರ್ತಿ

**IV.**

15 ತಂಗಿಯು ಗಜಮುರಿ ಜರತಾರಿ ಲಂಗ ಹಾಕಿಕೊಂಡಳು.

16 ಹಬ್ಬ- ಕಬ್ಬ

17 ಹಾಕಿಕೊಂಡು- ಮಾಡಿಕೊಂಡು

18 ಜೋಡಿ -ನೋಡಿ

19. ಅಚ್ಚು-ಮೆಚ್ಚು

**V.**

| **20 ಪುಲ್ಲಿಂಗ** | **ಸ್ತ್ರೀಲಿಂಗ** |
|---|---|
| ರಾಜ | ತಂಗಿ |
| ಅಣ್ಣ-ತಮ್ಮ | ಅಕ್ಕ -ತಂಗಿ |

# ಪಾಠ 9 ಭಗೀರಥ

**I.**

1. ನದಿ
2. ರಾಜ
3. ಮಹರ್ಷಿ

II.

4. ಋಷಿ, ಕೋಪ
5. ಚಿಗುರು ಎಳೆಯುವುದು

III.

6. ತಾತಂದಿರು
7. ರಭಸ
8. ಜ್ಞಾನಿ
9. ಅಸಾಧ್ಯ
10. ದೇವಲೋಕ
11. ಚಿಂತಾ ಕ್ರಾಂತ

IV.

12. ಭಗೀರಥನು ತನ್ನ ಸಾವಿರ ಜನ ತಾತಂದಿರಿಗೆ ಸ್ವರ್ಗ ಸಿಗಬೇಕೆಂದು ಚಿಂತಿಸುತ್ತಿದ್ದನು.
13. ದೇವಲೋಕದ ಗಂಗೆಯನ್ನು ಭೂಮಿಗೆ ತಂದು, ಭಗೀರಥನ ತಾತಂದಿರ ಬೂದಿಯ ಮೇಲೆ ಹರಿಸಬೇಕೆಂದು ಜ್ಞಾನಿಗಳಾದ ಋಷಿಗಳು ಹೇಳಿದರು.
14. ಎಷ್ಟೇ ಕಷ್ಟವಾದರೂ ಸರಿಯೇ ತಂಗೆಯನ್ನು ಭೂಮಿಗೆ ತರಬೇಕೆಂದು ತಪಸ್ಸಿಗೆ ಕುಲಿತನು.
15. "ನಿನ್ನ ಇಚ್ಛೆಯಂತೆ ನಾನು ಭೂಮಿಗೆ ಧುಮುಕುತ್ತೇನೆ. ಆದರೆ, ನನ್ನ ರಭಸವನ್ನು ತಡೆಯುವವರು ಯಾರು" ಎಂದು ಗಂಗೆ ಹೇಳಿದಳು.
16. ಗಂಗೆ ಹರಿಯುವ ರಭಸವನ್ನು ತಡೆದವರು ಶಿವ.

V.

17. ಶಿವನು ಹೇಳಿದನು
    ಭಗೀರಥನಿಗೆ ಹೇಳಿದನು
18. ಗಂಗೆಯು ಹೇಳಿದಳು
    ಭಗೀರಥನಿಗೆ ಹೇಳಿದಳು

VI.

19. ಭಗೀರಥನ ಕಠಿಣ ತಪಸ್ಸಿಗೆ ಮೆಚ್ಚಿದ ಶಿವನು "ನಿನ್ನ ಧೈರ್ಯ, ಭಕ್ತಿ,ದೃಢಸಂಕಲ್ಪವನ್ನು ಮೆಚ್ಚಿದ್ದEನೆ. ಧುಮ್ಮಿಕ್ಕುವ ಗಂಗೆಯನ್ನು ತಡೆದು ನಾನು ಶಿರದಲ್ಲಿ ಧರಿಸುತ್ತೇನೆ." ಎಂದು ಹೇಳಿದನು.

# ಪಾಠ 10 ಮೃಗಾಲಯದಲ್ಲಿ ಒಂದು ದಿನ

**I.**

1. ಮಕ್ಕಳು ಮೊದಲು ಸೂಚನಾ ಫಲಕಗಳು ಹಾಗೂ ಬಿತ್ತಿ ಪತ್ರಗಳನ್ನು ಗುರುತಿಸಬೇಕೆಂದು ಹೇಳಿದರು
2. ಸೂಚನೆಗಳನ್ನು ಒಳಗೊಂಡ ಫಲಕಗಳೇ ಸೂಚನಾ ಫಲಕಗಳು
3. ಅನೇಕ ರೀತಿಯ ಕಾಡು ಪ್ರಾಣಿಗಳು ಹಾಗೂ ಪಕ್ಷಿಗಳನ್ನು ಒಂದೆಡೆ ರಕ್ಷಿಸಿ ಇಡುವ ಜಾಗಕ್ಕೆ ಮೃಗಾಲಯ ಎಂದು ಕರೆಯುತ್ತೇವೆ
4. ನಾವು ಮೃಗಾಲಯವನ್ನು ಮೈಸೂರಿನಲ್ಲಿ ನೋಡಿದ್ದೇವೆ
5. ಬಿತ್ತಿ ಎಂದರೆ ಗೋಡೆ ಗೋಡೆಗಳಿಗೆ ಅಂಟಿಸುವ ಪತ್ರಗಳೇ ಬಿತ್ತಿ ಪತ್ರಗಳು
6. ನಮಗೆ ಇಷ್ಟವಾದ ಸೂಚನಾ ಫಲಕ ಇಲ್ಲಿ ಕಸವನ್ನು ಹಾಕಬಾರದು

II.

7. ಅಜಾಗರೂಕ
8. ಹೊರಗೆ
9. ಹಿಂದೆ
10. ಚಿಕ್ಕದು

III.

11. ಬಿತ್ತಿ ಪತ್ರ
12. ಸೂಚನಾ ಫಲಕ.
13. ಶಾಲಾ ವಲಯ
14. ತಿಂಡಿ ತಿನಿಸು.
15. ಹಾಸ್ಯ ಭರಿತ

IV

| | | | |
|---|---|---|---|
| 16. | ಹಾರು | ಹಾರುತ್ತಾನೆ | ಹಾರಿದನು |
| | ಮಾಡು | ಮಾಡುತ್ತಾನೆ | ಮಾಡಿದನು |
| | ಊದು | ಊದುತ್ತಾನೆ | ಒದಿದನು |
| | ಹಾಡು | ಹಾಡುತ್ತಾನೆ | ಹಾಡಿದನು |
| | ಒದು | ಒದುತ್ತಾನೆ | ಒದಿದನು |

V.

17. ಸೂಚನೆಗಳನ್ನು ಒಳಗೊಂಡ ಫಲಕಗಳೇ ಸೂಚನಾ ಫಲಕಗಳು
18. ಗೋಡೆಗೆ ಅಂಟಿಸುವ ಚಿತ್ರಗಳೇ ಭಿತ್ತಿ ಚಿತ್ರಗಳು
19. ನೀರು ಅಮೂಲ್ಯವಾದದ್ದು ಅದಕ್ಕಾಗಿ ಅದನ್ನು ಮಿತವಾಗಿ ಬಳಸಬೇಕು

# ಪಾಠ 11 ಜಾತ್ರೆ

**I.**

1. ಊರಿಗೆ ಊರ ಜಾತ್ರೆಯ ಸಂಭ್ರಮ
2. ಊರಲ್ಲಿ ಜಾತ್ರೆ ನಡೆಯುತ್ತಿತ್ತು
3. ಊರನ್ನು ತಳಿರು ತೋರಣ ಹಾಗೂ ಬಣ್ಣದ ಹೂಗಳ ಇಂದ ಅಲಂಕರಿಸಲಾಗಿತ್ತು
4. ತಾತನ ಜೊತೆ ರಾಜು ಮತ್ತು ಕಮಲಾ ಜಾತ್ರೆಗೆ ಹೋಗಿದ್ದರು
5. ರಾಜು ಮತ್ತು ಕಮಲ ತಾತನ ಜೊತೆ ಜಾತ್ರೆಗೆ ಹೋಗಿದ್ದರು
6. ಜಾತ್ರೆಗೆ ಜನರು ಸಾಗರದ ರೀತಿ ಸೇರಿದ್ದರು
7. ಭಕ್ತರು ರಥವನ್ನು ಎಳೆಯುವುದನ್ನು ನೋಡುತ್ತಿದ್ದರು
8. ಭತ್ತರು ರಥವನ್ನು ಎಳೆಯುತ್ತಿದ್ದರು.
9. ಜವಳಿಗೆಯನ್ನು ಕಂಕುಳಲ್ಲಿ ಹಾಕಿಕೊಂಡಿದ್ದರು
10. ವಿಭೂತಿಯನ್ನು ಹಣೆಗೆ ಧರಿಸಿದ್ದರು

II.

11. ಬಳ್ಳಾರಿ
12. ಹಾರ್ಮೋನಿಯಂ
13. ಮಂಡ್ಯ

III.

14. ಕಂಸಾಳೆಯನ್ನು ಬಾರಿಸುತ್ತಿದ್ದವರು ನೃತ್ಯದವರು ಕಂಸಾಳೆಯವ್ರು ಕಂಕುಳಲ್ಲಿ ಜವಳಿಗೆ ಹಾಕಿ ಹಣೆಗೆ ವಿಭೂತಿ ಧರಿಸಿ ಚನಕು ಚಣಕು ಎಂದು ಬಡಿಯುತ್ತಾ ಹಾಡುತ್ತಿದ್ದರು

15. ಕಂಸಾಳೆ ಅವರು ಕಂಸಾಳೆಯನ್ನು ಬೀಸುತ್ತಾ ನೃತ್ಯ ಮಾಡುತ್ತಾರೆ, ಇದಕ್ಕೆ ಬೀಸು ಕಂಸಾಳೆ ಎಂದು ಕರೆಯುತ್ತಾರೆ
16. ಕಂಸಾಳೆಯು ಚಾಮರಾಜನಗರ ಮೈಸೂರು ಮಂಡ್ಯ ಬೆಂಗಳೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ
17. ಯಕ್ಷಗಾನವು ಹೆಚ್ಚಾಗಿ ದಕ್ಷಿಣ ಕನ್ನಡ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ

IV.

18. ನಮ್ಮ ಊರಿನಲ್ಲಿ ಗ್ರಾಮದೇವತೆಯ ಜಾತ್ರೆಯು ನಡೆಯುತ್ತದೆ. ಅಲ್ಲಿ ಅನೇಕ ಜನರು ವಿವಿದ ಅಂಗಡಿಗ ಳನ್ನು ತೆರೆದಿರುತ್ತಾರೆ. ಊರಿನ ಗಂಡಸರು, ಹೆಂಗಸರು ಮಕ್ಕಳು ಸಂಭ್ರಮದಿಂದ ಭಾಗವಹಿಸುತ್ತಾರೆ.
19. ರಂಗಸ್ಥಳವನ್ನು ಬಣ್ಣದ ನಾಲ್ಕು ಕಂಬಗಳಿಂದ ಸಿಂಗರಿಸುತ್ತಾರೆ ರಂಗಸ್ಥಳದ ಹಿಂಭಾಗದಲ್ಲಿ ಬಿಳಿ ಅಂಗಿ ಬಿಳಿ ಪಂಚೆ ಕೆಂಪು ಮುಂಡಾಸು ಧರಿಸಿ ಕುಳಿತಿರುತ್ತಾರೆ ಅವರನ್ನು ಭಾಗವತರು ಎಂದು ಕರೆಯುತ್ತಾರೆ .
20. ಭಾಗವತರು ಸ್ತುತಿಯನ್ನು ಹಾಡಲು ಆರಂಭಿಸಿರು. ಮುಮ್ಮೇಳ ಮತ್ತು ಹಿಮ್ಮೇಳದವರು ಭಾಗವಹಿಸಿದ್ದರು.
21. ಜಾತ್ರೆಯ ದಿನ ಯಕ್ಷಗಾನದವರು ಶ್ರೀದೇವಿ ಮಹಾತ್ಮೆ ಎಂಬ ಪ್ರಸಂಗವನ್ನು ಪ್ರದರ್ಶಿಸಿದರು.

V.

22. ಬಿಳಿ ಪಂಚೆ, ಬಿಳಿ ಅಂಗಿ. ಕೆಂಪು ಮುಂಡಾಸು ಧರಿಸಿರುತ್ತಾರೆ ಹಣೆಗೆ ವಿಭೂತಿ ಕುಂಕುಮ ಧರಿಸಿರುತ್ತಾರೆ.
23. ಮ್+ಮ್+ಅ = ಮ್ಮ
24. ಉದಾ : ಮಕ್ಕಳೇ! ನೋಡಿ ಪ್ರಸಂಗ ಆರಂಭವಾಯಿತು.
25. ಉದಾ : ತಾತ ಅದೇನದು ಅಲ್ಲಿ ಕಾಣುತ್ತಿರುವುದು ?

.

# ಪಾಠ 12 ಅನಾರೋಗ್ಯದ ಸಿಂಹ

**I.**

1. ನಮ್ಮ ಶಾಲೆಯಲ್ಲಿ ಶಿಕ್ಷಕರು ಕಥೆಯನ್ನು ಹೇಳುವಾಗ ಕುತೂಹಲದಿಂದ ಕೇಳುತ್ತೇವೆ
2. ನಮ್ಮ ಶಾಲೆಯಲ್ಲಿ ಬೆಳಗ್ಗೆ 10 ಗಂಟೆಗೆ ಸರಿಯಾಗಿ ಪ್ರಾರ್ಥನಾ ದಂಟೆ ಬಾರಿಸುತ್ತದೆ
3. ಸಂತೆಯಲ್ಲಿ ಭಿನ್ನ ಭಿನ್ನವಾದ ತರಕಾರಿಗಳು ದೊರಕುತ್ತವೆ

II.

4. ಕಾಡಿನ ರಾಜ ಸಿಂಹಕ್ಕೆ ಕಾಯಿಲೆ ಆಯಿತು. ಜೀ ಪ್ರಭು ರಾಜನನ್ನು ಪರೀಕ್ಷಿಸಿ ಬಾಯಲ್ಲಿ ದುರ್ವಾಸನೆ ಊರಿದ ಎಂದು ಹೇಳಿತು
5. ಡಾ. ಹೈನಾವು ಕಾಡಿನ ರಾಜ ಸಿಂಹನನ್ನು ಪರೀಕ್ಷಿಸಿ ಎಂಥಾ ಸುಹಾಸನೆ ನಿಮ್ಮ ಉಸಿರಲಿ ಎಂದು ಹೇಳಿತು
6. ನರಿವು ಕಾಡಿನ ರಾಜ ಸಿಂಹನನ್ನು ಪರೀಕ್ಷಿಸಿ ಸೀತದಿಂದ ಮೂಗು ಕಟ್ಟಿದೆ ಒಡೆಯ ವಾಸನೆ ಏನು ತಿಳಿಯದು ನನಗೆ ಎಂದು ಕ್ಷಮೆಯಾಚಿಸಿತು ಹಾಗೂ ಈ ಪದ್ಯದ ನೀತಿ ಉಪಾಯ ಬಲ್ಲವನಿಗೆ ಅಪಾಯವಿಲ್ಲ.

III.

7. ಕಾಡು
8. ವ್ಯಾಧಿ
9. ಕೆಟ್ಟವಾಸನೆ

IV. 13,14,15,16,17,18,ವಿದ್ಯಾರ್ಥಿಗಳು ನೀಡಿದ ಅಕ್ಷರ ಮತ್ತು ಪದಗಳ ಧ್ವನಿ ಉಚ್ಚಾರ ಮಾಡುವರು ಮತ್ತು ವ್ಯತ್ಯಾಸ ಗುರುತಿಸಿ ತಿಳಿಸುವರು

19. ಕಾಡಿನರಾಜ ಸಿಂಹವು ಕಾಯಿಲೆ ಬಿದ್ದಿತ್ತು. ಅನ್ನ ಮತ್ತು ನೀರು ಸೇರುತ್ತಿರಲಿಲ್ಲ ಹಾಗಾಗಿ ವ್ಯಥೆ ಪಡುತ್ತಿತ್ತು.
20. ಬಾಯಿ ತೆರೆಯಲು ಹೇಳಿತು. ಬಾಯಿಯಿಂದ ದುರ್ವಾಸನೆ ಬರುತ್ತಿದೆ. ಎಂದು ಹೇಳಿತು.
21.ನಾಡಿಯ ಹಿಡಿದು ನೋಡಿತು ಮತ್ತು ಬಾಯಿಯನ್ನು ತೆರೆಯಲು ಹೇಳಿತು. ಸಿಂಹಕ್ಕೆ ಕೋಪವು ನೆತ್ತಿಗೆ ಏರಿ "ಮುಖಸ್ತುತಿ ಮಾಡುವಿ' ಎಂದು ಹೇಳಿ ಮನೆಯಿಂದ ಹೊರಹಾಕಿತು.
22. ಶೀತದಿ ಮೂಗು ಕಟ್ಟಿದೆಒಡೆಯ, ವಾಸನೆ ಏನು ತಿಳಿಯದು ನನಗೆ ಎನ್ನು ಉಪಚಾರವನ್ನು ಮಾಡಿತು.

23.ಕಾಡಿನರಾಜ <u>ಸಿಂಹರಾಯನು</u>
<u>ಕಾಯಿಲೆ ಬಿದ್ದನು ಕೇಳಿ ಕಥೆ</u>
ಅನ್ನವು <u>ಸೇರದು ನೀರೂ ಸೇರದು</u>
<u>ರಾಜನಿಗಾಯಿತು ಬಹಳ ವ್ಯಥೆ</u>

# ಪಾಠ 13 ಹೊಯ್ಸಳ

**1**

1. ಬೇಲೂರು
2. ಮೂಡಿಗೆರೆ
3. ವಿಷ್ಣುವರ್ಧನ
4. ಬೆಚ್ಚಿಬೀಳು
5. ಭಾವಸೂಚಕ

II.

6. ದಂಡನಾಯಕ
7. ಹಂಪೆ
8. ಹನುಮಂತ

III.

9.ನಾನು ಬೆಗಳೂರಿಗೆ ಹೋಗಬೇಕು

ಒಂದು ಟಿಕೆಟ್ ಕೊಡಿ

10.ಕೆಮ್ಮು ಇದೆ.

ಇಲ್ಲ, ಯಾವ ಔಷದಿಯನ್ನೂ ತೆಗೆದುಕೊಂಡಿಲ್ಲ.

IV.

11."ಭಲೇ! ಸಳ ಒಳ್ಳೆಯ ಕೆಲಸ ಮಾಡಿದೆ"

12."ಗುರುಗಳೇ, ಅಲ್ಲಿ ಕಾಣುತ್ತಿರುವ ಊರು ಯಾವುದು ?"

13.ಮದನಿಕ ವಿಗ್ರಹಗಳು ತಮ್ಮ ಅಪೂರ್ವ ಸೌಂದರ್ಯದಿಂದ ನಯನ ಮನೋಹರವಾಗಿವೆ.

14.ಸಲನು ಹಿಲಿಯೊಡನೆ ಹೊರಾಡಿದ ಘಟನೆಯ ಶಿಲ್ಪ

15. ನಕ್ಷತ್ರಾಕಾರದ ಜಗುಲಿಯ ಮೇಲೆ ಈ ದೇವಾಲಯವು ನಿರ್ಮಾಣವಾಗಿದೆ.

V.

16. ತಮ್ಮ ಗುರುಗಳು ಪಾಠ ಮಾಡುತ್ತಿರುವಾಗ ಒಂದು ಹುಲಿಯು ಆರ್ಭಟಿಸುತ್ತಾ ಬಂದಿತು. ಎಲ್ಲರೂ ಹೆದರಿದರು. ಗುರುಗಳು ಒಂದು ಕಬ್ಬಿNದ ಸಲಾಕೆಯನ್ನು ನೀಡಿ "ಹೊಯ್ ಸಳ" 'ಹೊಯ್ ಸಳ' ಎಂದು ಕೂಗಿ ಹೇಳಿದರು. ಕಲಿಯೂ, ಬಲಶಾಲಿಯೂ ಆದ ಸಳನು ಸ್ವಲ್ಪವೂ ಹೆದರದೆ ಸಲಾಕೆಯಿಂದ ಹುಲಿಯನ್ನುಮಣಿಸಿದನು. ಅನMತರ ಆ ಕಬ್ಬಿಣದ ಸಲಾಕೆಯನ್ನು ಹುಲಿಯ ಬಾಯಲ್ಲಿ ತೂರಿಸಿ ಅದನ್ನು ಕೊಂದು ಹಾಕಿದನು.

17.ಬೇಲೂರಿನಲ್ಲಿರುವ ಚನ್ನಕೇಶವ ದೇವಾಲಯವು ನಕ್ಷತ್ರಾಕಾರದ ಜಗುಲಿಯ ಮೇಲೆ ರಚನೆಯಾಗಿದೆ. ಪೂರ್ಣ ಕಲ್ಲಿನಿಂದಲೇ ನಿರ್ಮಾಣವಾಗಿರುವ ದೇವಾಲಯವು ಅಪೂರ್ವ ಸೌಂದರ್ಯದಿಂದ ನಯನ ಮನೋಹರವಾಗಿದೆ.

18.ಚನ್ನಕೇಶವ ದೇವಾಲಯದ ಸುತ್ತಲಿನ ಮೂಲೆ ಮೂಲೆಗLಲ್ಲಿ ತೊಲೆಗLಗೆ ಅMಟಿಕೊಂಡಿರುವ ಮದನಿಕ ವಿಗ್ರಹಗಳು ತಮ್ಮ ಅಪೂರ್ವ ಸೌಂದರ್ಯದಿMದ ನಯನ ಮನೋಹರವಾಗಿದೆ.

# ಪಾಠ- 14 ರಾಜನ ಸುಪ್ರಭಾತ

**I.**

1. ಉದಯಿಸು
2. ಕನಸು
3. ನಯನ
4. ಪುಸ್ತಕ
5. ಭಾನುವಾರ

II.

6. ಬಾಲಕಿ ಕಥೆ ಓದಿದಳು
7. ಅಕ್ಕ ಸಂತೆಗೆ ಹೋದಳು
8. ಅಮ್ಮ ತಿಂಡಿ ತಿಂದಳು
9. ಗೆಳತಿ ಆಟ ಆಡಿದಳು

III.

10. ಹಾಡು -ಕಾಡು ಜಾಡು
11. ಮಜಾ- ಸಜಾ ವಜಾ

IV.

12. ಸಾಕಿನ್ನು
13. ನೆನ್ನೆಗೆ ಆಯಿತು

V. 14. ನಮ್ಮೂರ ಶಾಲೆಯು ನೋಡಲು ತುಂಬಾ ಸುಂದರವಾಗಿದೆ. ಸುತ್ತಲೂ ಗಿಡ-ಮರಗಳಿಂದ ಕಂಗೊಳಿಸುತ್ತದೆ..

14. ಪುಸ್ತಕಗಳೆಂದರೆ ನನಗೆ ಪಂಚಪ್ರಾಣ. ದಿನವೂ ಮನೆಯಲ್ಲಿ ಪುಸ್ತಕಗಳನ್ನು ನಾನು ಓದುತ್ತೇನೆ.

VI.

16.ಶೂಗಳನ್ನು ಕಟ್ಟಿಕೋ ಚೀಲವನ್ನು ಎತ್ತಿಕೋ
ಶಾಲಾ ಕಡೆ ಹೆಜ್ಜೆ ಇಡು ರಾಜಾ ನಮ್ಮ ರಾಜಾ

ನಿಜವೇಂದ್ರೆ ನನ್ನವ್ವ ಇವತ್ತು ರವಿವಾರ
ಶಾಲೆಗೆ ರಜಾ ಎನ್ನುವ ರಾಜಾ ನಮ್ಮ ರಾಜಾ

ಅಕಟಕಟ ವಾರಕ್ಕೆ ಒಂದೇ ರವಿವಾರ ಕಣ
ಅದು ನೆನ್ನೆಗಾಯಿತು ರಾಜಾ ನಮ್ಮ ರಾಜಾ

# ಪಾಠ 15 ಆಡೋಣ ಬಾ

I.

1. C) ಚಿನ್ನಿ ದಾಂಡು
2. D) ಆಣೆಕಲ್ಲು
3. A) ಅರಣ್ಯ ವನ
4. B) ಎಡಬಲ
5. A) ಅವಸರ

II

6. ಒಳಾಂಗಣ ಆಟಗಳು: --ಕೇರಂ ಹಾಗೂ ಏಣಿ ಆಟ
   ಹೊರಾಂಗಣ ಆಟಗಳು: --ಕ್ರಿಕೆಟ್ ಕೋಕೋ ಕಬ್ಬಡಿ

III.

7. ಪ್ರವಾಸಿ ತಾಣಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಿರುತ್ತಾರೆ
8. ಪ್ರತಿನಿತ್ಯ ವ್ಯಾಯಾಮ ಮಾಡುವುದು ಆರೋಗ್ಯಕ್ಕೆ ತುಂಬಾ ಒಳ್ಳೆಯದು
9. ನಾವು ದಣಿವಾದಾಗ ಸ್ವಲ್ಪ ಸಮಯ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕು

IV.

10. ಆನೆ ,ಕಪ್ಪು
11. ಸಾಹಿತಿ ,ಆವರಿಸು

V

12. ಮಕ್ಕಳು ಕುಣಿದು ಕುಪ್ಪಳಿಸಲಿಲ್ಲ
13. ಹುಲಿಯು ಜೋರಾಗಿ ಗರ್ಜನೆ ಮಾಡಲಿಲ್ಲ
14. ಅಪ್ಪ ಸಂತೆಗೆ ಹೋಗಲಿಲ್ಲ.
15. ನಾನು ಪಾಠ ಓದಲಿಲ್ಲ.

VI. ಚೌಕಾಬಾರ ಐದು ಮನೆ ಮತ್ತು ಏಳು ಮನೆ - ಎಂದು ಎರಡು ವಿಧಗಳಿವೆ.

ಎರಡೂ ಬಗೆಯ ಆಟಗಳಿಗೆ ನಾಲ್ಕು ಕಾಯಿಗಳು ಇರುತ್ತವೆ.

ಈ ಆಟದಲ್ಲಿ ಪ್ರತಿ ಆಟವನ್ನು ಇಬ್ಬರು/ ನಾಲ್ಕು ಮಂದಿ ಆಡಬಹುದು.

ಚೌಕಾಬಾರ ಆಡಲು ತೇಯ್ದ ಹುಣಸೇ ಬೀಜ, ಕವಡೆ ಹಾಗೂ ಪಗಡೆಯ ದಾಳಗಳನ್ನು ಬಳಸುತ್ತಾರೆ.

ಚೌಕಾಬಾರ ಆಟದಲ್ಲಿ ಪ್ರತಿ ಆಟಗಾರ ಕೂರುವ ನಿರ್ದಿಷ್ಟ ಸ್ಥಳವನ್ನು ಘಟ್ಟ ಎನ್ನುತ್ತಾರೆ.

# ಪಾಠ 16 ಮುಳುಗದ ಸೂರ್ಯ

**I.**

1. ಭೂಮಿ
2. ಕುರುಡ
3. ಪರಿಮಳ
4. ಸೂರ್ಯ
5. ಹಾಡುಗಾರ

II

6. ಗಿರಿ, ಪರ್ವತ
7. ರಾಜ, ದೊರೆ

III.

8. ಪುಟ್ಟರಾಜರು ಹಾವೇರಿ ತಾಲೂಕಿನ ದೇವಗಿರಿಯಲ್ಲಿ ಜನಿಸಿದರು
9. ಪುಟ್ಟರಾಜರ ತಂದೆ ರೇವಣ್ಣಯ್ಯ ಹಾಗೂ ತಾಯಿ ಸಿದ್ದಮ್ಮ
10. ಪುಟ್ಟರಾಜರು ಗುರು ಪಂಚಾಕ್ಷರಿ ಗವಾಯಿಗಳ ಹತ್ತಿರ ಸಂಗೀತವನ್ನು ಪಡೆದರು

IV 11. C) ವದನ,

12. C) ಕೆಂಪು,
13. A) ದರ್ಪ,
14. D) ನಿದಾನ

V.

15. ಪು.ಗು ಸಿದ್ದಾಪುರ ಇವರು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಜನಿಸಿದರು
16. ಪು.ಗು ಸಿದ್ದಾಪುರ ಇವರ ತಂದೆ ಹೆಸರು ಗುರುಪಾದಪ್ಪ ತಾಯಿಯ ಹೆಸರು ಯಮುನಾ
17. ಪು.ಗು ಸಿದ್ದಾಪುರ ಇವರು ಮಕ್ಕಳ ಸಾಹಿತ್ಯದಲ್ಲಿ ಹೆಸರುವಾಸಿಯಾಗಿದ್ದರು
18. ಪು.ಗು ಸಿದ್ದಾಪುರ ಇವರು ರಚಿಸಿದ ಮಕ್ಕಳ ಸಾಹಿತ್ಯಗಳೆಂದರೆ ಯಾವೂರಾನೆವಿಜಾಪುರದಾನೆ, ಕರಡಿ ಹೇಳಿದ ಕಥೆ ಬಂಗಾರದ ಬಳೆ ಇನ್ನು ಅನೇಕ ಕಥೆಗಳು.

V I.

ಕಟ್ಟಿ ಬೆಳೆಸಿ ತಾ ಹುಟ್ಟು ಹಾಕಿದ
ಗಾನಯೋಗಿಯು ಸ್ವರಲೋಕ
ಸಾವಿರ ಸಾವಿರ ಅಂದ ಮಕ್ಕಳಿಗೆ
ಸಜ್ಜಾಯಿತು ಈ ಭೂಲೋಕ